


ಕಲ್ಯಾಣ ಕಿರಣ

ಎಮ್ಮ ವಚನದ ನೂರೆಂಟರಧ್ಯಯನಕ್ಕೆ ಶತರುದ್ರೀಯ ಸಮಬಾರದಯ್ಯ

ಸೆಪ್ಟೆಂಬರ್-2014

ಬೆಲೆ-₹ 20



108 ಅಡಿ ಬಸವ ಪುತ್ಥಳಿ- ಬಸವ ಕಲ್ಯಾಣ, ಬೀದರ ಜಿಲ್ಲೆ



ವಿಜಾಪೂರ ಜಿ॥ ಕಗ್ಗೋಡ ಗ್ರಾಮದ ಶರಣೆಯರಿಂದ ಪೂಜ್ಯ ಡಾ॥ಮಾತಾಜಿಯವರಿಗೆ ಗೌರವಾರ್ಪಣೆ



ವಿಜಾಪೂರ ಜಿ॥ ಕಗ್ಗೋಡ ಗ್ರಾಮದಲ್ಲಿ ನಡೆದ ವಿಶ್ವಧರ್ಮ ಪ್ರವಚನದ ಸಮಾರೋಪ ಸಮಾರಂಭದಂದು ಶರಣರ ರೂಪಕಗಳೊಂದಿಗೆ ಪಥ ಸಂಚಲನ



ದಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ನಡೆದ ಶ್ರಾವಣ ಮಾಸದ ಬಸವ ಜ್ಯೋತಿ ಕಾರ್ಯಕ್ರಮದ ಮುಕ್ತಾಯ ಸಮಾರಂಭ

ಕಲ್ಯಾಣ ಕಿರಣ

ಬನ್ನಿ ಕಲ್ಯಾಣ ಪರ್ವಕೆ

ಬನ್ನಿ ಬನ್ನಿ ನೋಡಬನ್ನಿ ಬಸವ ಕಲ್ಯಾಣವ
ಬನ್ನಿ ಬನ್ನಿ ಹಾಡಬನ್ನಿ ಶರಣಸ್ಮರಣ ಗೀತೆಯ ॥ಪ॥

ಗುರು ಬಸವಣ್ಣನ ಕಾರ್ಯಕ್ಷೇತ್ರ ಕಲ್ಯಾಣ
ಮಹಾಮನೆ ಹೊಂದಿದ್ದ ದಿವ್ಯ ತಾಣ ಕಲ್ಯಾಣ
ಅನುಭವ ಮಂಟಪವ ಹೊಂದಿ, ಅಂದು ಮೆರೆದ ಕಲ್ಯಾಣ
ಲಿಂಗದೇವ ಲೀಲೆ ಹಾಡ್ದ ಶರಣ ಭೂಮಿ ಕಲ್ಯಾಣ ॥1॥

ಕಲ್ಯಾಣ ಪ್ರಣತೆಯಾಗಿ ಭಕ್ತಿರಸವೆ ತೈಲವಾಗಿ
ಆಚಾರ ಬತ್ತಿಹಿಡಿದು ಬೆಳಗಿತಂದು ಬಸವ ಜ್ಯೋತಿ
ಶಿವನ ಪ್ರಕಾಶದಲಿ ಬಾಳ ಹಣತೆ ಬೆಳಗಿಕೊಂಡು
ಶರಣ ಗಣವು ಕೂಡಿತಂದು ವಚನ ಜೇನು ನೀಡುತಲಿ ॥2॥

ಕಲ್ಯಾಣ ನಾಡಿನಲಿ ಅಂದು ಒಂದು ಕ್ರಾಂತಿಯಾಗಿ
ಧರ್ಮಪಿತರು ನಡೆದರು ಗಡಿಪಾರಿನ ದಂಡಗೊಂಡು
ಹರಳಯ್ಯ-ಮಧುವಯ್ಯ-ಶೀಲವಂತ ಶರಣರು
ಹರಣ ತೆತ್ತು ಹಾಡಿದರು ಬಸವ ತತ್ತ್ವ ಕ್ರಾಂತಿ ಗೀತ ॥3॥

ವಚನ ಸಿರಿಯ ರಕ್ಷಿಸಲು ಶರಣ ಗಣವು ನಿಂತಿತು
ತನುಮನ ಪ್ರಾಣಗಳ ಪಣಕ್ಕಿಟ್ಟು ಹೋರಾಡಿತು
ಹುತಾತ್ಮರಾದ ಶರಣರ ಸಂಕಲ್ಪ ಪೂರೈಸಲು
ಇಂದು ಅವರ ಚೇತನವ ತರುವಾ ಕಲ್ಯಾಣಕೆ ॥4॥

ಆಶ್ವಯುಜ ಮಾಸದಲಿ ನಡೆಯುತಿದೆ ಕಲ್ಯಾಣ ಪರ್ವ ನಾಡ
ಮೂಲೆ ಮೂಲೆಯಿಂದ ಬನ್ನಿ ಶರಣ ಬಂಧುಗಳೇ
ಬಸವ ಕರುಳ ಕುಡಿಗಳನ್ನು ಬೆಸೆಯುವ ಹಬ್ಬವಿದು
ವಚನ ಪರ್ವ ತತ್ತ್ವ ಪರ್ವ, ಕಮ್ಮನೆಯ ಶರಣ ಪರ್ವ ॥5॥

ತಮಿಳು ನಾಡು, ತೆಲುಗು ನಾಡು, ಮಹಾರಾಷ್ಟ್ರ, ಹಿಂದಿನಾಡು
ಕರುನಾಡಿನ ಮೂಲೆಯಿಂದ ಬನ್ನಿರೆಲ್ಲ ಕಲ್ಯಾಣಕೆ
ನಾವು ನೀವು ಎಲ್ಲ ಸೇರಿ ಶರಣರನ್ನು ಸ್ಮರಿಸುವಾ
ಛಲವ ತೊಟ್ಟು ಕಟ್ಟುವಾ ಮತ್ತೆ ನವಕಲ್ಯಾಣ. ॥6॥

– ಮಾತಾಜಿ

ಸಿದ್ಧರಾಮೇಶ್ವರರ ವಾಣಿ

ಕಪಿಲಸಿದ್ಧ ಮಲ್ಲಿಕಾರ್ಜುನದೇವರ ದೇವಾ.
ನಿಮ್ಮ ಸಂಗನ ಬಸವಣ್ಣ ಬಂದು ಮರ್ತ್ಯದಲ್ಲಿ
ಮಹಾಮನೆಯ ಕಟ್ಟದರ ಮತ್ಯಲೋಕವೆಲ್ಲವೂ ಭಕ್ತಿಸಾಮಾಜ್ಯವಾಯಿತ್ತು.

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

ಸಂಪುಟ-45	ಬಸವ ಶಕೆ -881	ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-09	ಸೆಪ್ಟೆಂಬರ್-2014	ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಅಕ್ಟೋಬರ್ ತಿಂಗಳಿನ ಹಬ್ಬ – ಹುಣ್ಣಿಮೆ–ಉತ್ಸವ

*ನವರಾತ್ರಿಯ ಶರಣೋತ್ಸವ ಪಾರಾಯಣ ಪ್ರಾರಂಭ– ಸೆಪ್ಟೆಂಬರ್ 25

*ಹರಳಯ್ಯ –ಮಧುವರಸರ ಸಂಸ್ಮರಣೋತ್ಸವ – ಅಕ್ಟೋಬರ್03

*ಬಸವ ಧರ್ಮದ ವಿಜಯೋತ್ಸವ – ಅಕ್ಟೋಬರ್ 4

*ಅಕ್ಕನಾಗಲಾಂಬಿಕ ಸಂಸ್ಮರಣೆ – ಅಕ್ಟೋಬರ್ 4

*13ನೆಯ ಕಲ್ಯಾಣ ಪರ್ವ ಅಕ್ಟೋಬರ್ 18, 19ಮತ್ತು 20ರಂದು

ಕಲ್ಯಾಣ ಕಿರಣ ಚಂದಾ

ಕಲ್ಯಾಣ ಕಿರಣದ ವಾರ್ಷಿಕ ಚಂದಾ 200ರೂ. ಪಂಚವಾರ್ಷಿಕ ಚಂದಾ 1000ರೂ. ಕಳಿಸಬೇಕು ಎನ್ನುವವರು ಎಂ.ಓ. ಮೂಲಕ, ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬಹುದು. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ ಡಿ.ಡಿ. ತೆಗೆಸಬೇಕು.

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್

ಬಸವ ಮಂಟಪ, 2035, 20ನೇ ಮೇನ್, ರಾಜಾಜಿನಗರ 2ನೇ ಬ್ಲಾಕ್ ಬೆಂಗಳೂರು-560010

ದೂರವಾಣಿ : 080-23131476 / 9945806297

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476, Send SMS to 9945806297

Email :- kalyanakirana1970@gmail.com

ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ
ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಹದಿಮೂರನೆಯ

ಕಲ್ಯಾಣ ಪರ್ವ

2014ರ ಅಕ್ಟೋಬರ್ 18, 19 ಮತ್ತು 20ರಂದು

ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತೆ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 27ನೆಯ ಶರಣ ಮೇಳವು ಇದೇ 2014ರ ಜನವರಿಯಲ್ಲಿ ಯಶಸ್ವಿಯಾಗಿ ಜರುಗಿದೆ. ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

"ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ ಬಂದು
ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿಸಾಮ್ರಾಜ್ಯವಾಯಿತು"

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯಿಂದಲೂ ಕಲ್ಯಾಣಪರ್ವ ಎಂಬ ವಾರ್ಷಿಕ ಉತ್ಸವವನ್ನು ನಡೆಸಲಾಗುತ್ತಿದೆ. 2014ನೆಯ ಇಸವಿಯಲ್ಲಿ 13ನೆಯ ಕಲ್ಯಾಣ ಪರ್ವವು ಜರುಗಲಿದ್ದು, ಅಕ್ಟೋಬರ್ 18,19 ಮತ್ತು 20ರಂದು ನಡೆಯಲಿದೆ.

ಶರಣ(ಶನಿ)ವಾರ, ದಿ. 18ರಂದು ಬೆಳಿಗ್ಗೆ 10-30ಕ್ಕೆ ಉದ್ಘಾಟನೆ ಮತ್ತು ಸಾಮೂಹಿಕ ಪ್ರಾರ್ಥನೆ, ಮಧ್ಯಾಹ್ನ 3-30ರಿಂದ 5-30ರವರೆಗೆ ರಾಷ್ಟ್ರೀಯ ಬಸವ ದಳದ ಸಮಾವೇಶ ; ಸಂಜೆ -6-30ರಿಂದ ಚಿಂತನಗೋಷ್ಠಿ. ದಿ.19 ದೇವ(ಭಾನು)ವಾರದಂದು ಬೆಳಿಗ್ಗೆ 07-30ಕ್ಕೆ ಶರಣ ವಂದನೆ-ಶರಣರಿಗೆ ಶರಣಾರ್ಥಿ, ಬೆಳಿಗ್ಗೆ 10-30ಕ್ಕೆ ಸಾಮೂಹಿಕ ಪ್ರಾರ್ಥನೆ ಮಧ್ಯಾಹ್ನ 3-30ರಿಂದ 5-30ರವರೆಗೆ ಆಶುಭಾಷಣ ಸ್ಪರ್ಧೆ, ಸಂಜೆ 6-30ರಿಂದ ಚಿಂತನಗೋಷ್ಠಿ, ದಿ.20 ಶಿವ(ಸೋಮ)

ವಾರದಂದು ಅಕ್ಕನಾಗಲಾಂಬಿಕೆಯ ಸಂಸ್ಮರಣೆಯ ನಿಮಿತ್ತ ಬಸವ ಧರ್ಮ ವಿಜಯೋತ್ಸವ ಕಾರ್ಯಕ್ರಮ ನಂತರ ಅಲ್ಲಮಪ್ರಭು ಶೂನ್ಯ ಪೀಠಾರೋಹಣ ಮತ್ತು ಸಮಾರೋಪ ಸಮಾರಂಭ ಜರುಗಲಿವೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು; ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು -ಕಲ್ಯಾಣ. ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು. ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ, ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. ಅಂಥ ಗಣಪರ್ವವನ್ನು ಇಂದು ನೀವು ನಾವು ಮಾಡಿ ತೋರಿಸಬೇಕಾಗಿದೆ. ಅಕ್ಟೋಬರ್ 17ರ ರಾತ್ರಿಯಿಂದ ಅಕ್ಟೋಬರ್ 21 ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ)ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು.ಶರಣ ಬಂಧುಗಳು ಒಂದು ಹೊತ್ತಿನ ಪ್ರಸಾದ ದಾಸೋಹದ ವೆಚ್ಚವನ್ನು ಭರಿಸಲೂ ಅವಕಾಶ ಉಂಟು.

1. ಮಹಾಪೋಷಕರು	:	10000 ರೂ. ಮತ್ತು ಮೇಲೆ ಕೊಟ್ಟವರು
2. ಪೋಷಕರು	:	5000 ರೂ. ಮತ್ತು ಮೇಲೆ ಕೊಟ್ಟವರು
3. ದಾನಿಗಳು	:	2000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು	:	1000 ರೂ
5. ಸ್ವಾಗತ ಸಮಿತಿ ಸದಸ್ಯತ್ವ	:	500 ರೂ
6. ಪ್ರತಿನಿಧಿ ಶುಲ್ಕ	:	150 ರೂ.

ಅನ್ನದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸುವವರಿಗೂ ಅವಕಾಶವಿದೆ.

ಇನ್‌ಕಮ್ ಟ್ಯಾಕ್ಸದಲ್ಲಿ 80ಜಿ ರಿಯಾಯಿತಿಯ ಸೌಲಭ್ಯವೂ ಇದೆ.

ಸಂಪರ್ಕಿಸುವ ವಿಳಾಸಗಳು

ಪೂಜ್ಯ ಶ್ರೀ ಮಹಾಜಗದ್ಗುರು
ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ (ರಿ.)
ಬಸವ ಮಂಟಪ, 2035, 20ನೆಯ ಮುಖ್ಯರಸ್ತೆ,
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
☎ 080-22923736/9448137508

ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮಿಗಳು
ಪೀಠಾಧ್ಯಕ್ಷರು, ಅಲ್ಲಮಪ್ರಭು ಶೂನ್ಯ ಪೀಠ
ಬಸವ ಧರ್ಮ ಪೀಠ (ರಿ.)
ಬಸವ ಮಹಾಮನೆ, ಬಸವ ಕಲ್ಯಾಣ-585 327
ತಾ-ಬಸವಕಲ್ಯಾಣ, ಜಿ-ಬೀದರ್
☎ 08481-252856/9448732456

ಅಕ್ಕನ ಅಮರವಾಣಿ

– ಮಾತಾಜಿ

ಭಾಗ-7

139. ಸದ್ಗುಣ ಅಳವಡಿಸಿಕೊಳ್ಳುವಿಕೆ

ತನು ಕರಗದವರಲ್ಲಿ ಮಜ್ಜನವನೊಲ್ಲೆಯಯ್ಯಾ ನೀನು.
ಮನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯಾ ನೀನು.
ಹದುಳಿಗರಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯಾ ನೀನು.
ಅರಿವು ಕಣ್ದೆರೆಯದವರಲ್ಲಿ ಆರತಿಯನೊಲ್ಲೆಯಯ್ಯಾ ನೀನು.
ಭಾವಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯಾ ನೀನು.
ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯಾ ನೀನು.
ತ್ರಿಕರಣ ಶುದ್ಧವಿಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯಾ ನೀನು.
ಹೃದಯಕಮಲ ಅರಳದವರಲ್ಲಿ ಇರಲೊಲ್ಲೆಯಯ್ಯಾ ನೀನು
ಎನ್ನಲ್ಲಿ ಏನುಂಟೆಂದು ಎನ್ನ ಕರಸ್ಥಲವನಿಂಬುಗೊಂಡೆ
ಹೇಳಾ ಚೆನ್ನಮಲ್ಲಿಕಾರ್ಜುನ ದೇವರ ದೇವಯ್ಯಾ?

ಧರ್ಮವಂತಿಕೆಯ ಮೊದಲ ಮೆಟ್ಟಲು ನೀತಿವಂತಿಕೆ. ಸದ್ಗುಣಗಳನ್ನು ಬೆಳೆಸಿಕೊಳ್ಳದಿದ್ದರೆ ದೇವರು ಮೆಚ್ಚುವುದಿಲ್ಲ. ಕಳೆ ತುಂಬಿದ ಭೂಮಿಯಲ್ಲಿ ಬೀಜಗಳನ್ನು ಬಿತ್ತಿದರೆ ಅವು ಮೊಳೆಯವು ಫಲಕೊಡವು. ಮೊದಲು ಭೂಮಿಯನ್ನು ಹಸನುಗೊಳಿಸಬೇಕು; ನಂತರ ಬೀಜವನ್ನು ಬಿತ್ತಬೇಕು. ಹಾಗೆ ನೀತಿವಂತಿಕೆ ಹೃದಯ ಭೂಮಿಕೆಯನ್ನು ಹಸನು ಮಾಡುವುದು. ನಂತರ ಅಲ್ಲಿ ಭಕ್ತಿಯ ಬೀಜವನ್ನು ಬಿತ್ತಬೇಕು. ದೇವರ ಪೂಜೆ ಮಾಡುವ ಉದ್ದೇಶ ದೈವೀಗುಣಗಳನ್ನು ಅಳವಡಿಸಿಕೊಳ್ಳಬೇಕೆಂದು. ಅದನ್ನು ಈ ವಚನದಲ್ಲಿ ಹೇಳಲಾಗಿದೆ. ಕಾಯಕವನ್ನು ಮಾಡಿದಾಗ ಶರೀರವು ದಣಿಯುತ್ತದೆ, ಬೆವರು ಹರಿಯುತ್ತದೆ; ಶರೀರವು ಕರಗುತ್ತದೆ. ಕಾಯಕ ಜೀವಿಗಳಲ್ಲದ ಸೋಂಬೇರಿಗಳು ನೂರು ಕೊಡಗಳ ನೀರಿನಿಂದ ಅಭಿಷೇಕ ಮಾಡಿದರೂ ದೇವನಿಗೆ ಮುಟ್ಟದು. ಕಾಯಕ ಜೀವಿಗಳು ಒಂದು ಮಿಣಿಲೆಯಷ್ಟು ನೀರನ್ನು ಎರೆದರೂ ಅದು ದೇವರಿಗೆ ಪ್ರಿಯ. ಈ ವಾಕ್ಯದ ಮೂಲಕ ಅಕ್ಕನವರು ಕಾಯಕಕ್ಕೆ, ದುಡಿಮೆಗೆ ಎಷ್ಟು ಮಹತ್ವ ನೀಡಿದ್ದಾರೆಂಬುದು ಮನವರಿಕೆಯಾಗುತ್ತದೆ. ಮನಸ್ಸು ದಯೆಯಿಂದ ಕರಗಬೇಕು. ಇತರರ ಕಷ್ಟ ನೋಡಿದಾಗ ಮನಸ್ಸು ಮರುಗಬೇಕು. ಅಂಥ ಮಾನವೀಯ ಹೃದಯದವರಿಂದ ದೇವರು ಹೂವನ್ನು ಸ್ವೀಕರಿಸುವನು. ಕಠಿಣ ಹೃದಯದ ನಿರ್ದಯಿಗಳು ಎಷ್ಟು ಹೂವು-ಪತ್ರೆಗಳನ್ನು ಏರಿಸಿದರೂ ಅವು ದೇವರಿಗೆ ಸ್ವೀಕೃತವಾಗವು. ಹದುಳಿಗರು ಅಂದರೆ ಸದಾ ಇತರರ ಲೇಸು ಬಯಸುವವರಿಂದ ದೇವರು ಗಂಧಾಕ್ಷತೆಗಳನ್ನು ಸ್ವೀಕರಿಸುವನು. ಇತರರಿಗೆ ಕೇಡು ಬಯಸುವ ಗುಣ ಉಳ್ಳವರಿಂದ ಶಾಂತಿ ಗುಣ ದ್ಯೋತಕವಾದ ಗಂಧವನ್ನು ದೇವರು ಸ್ವೀಕರಿಸುವುದಿಲ್ಲ. ಜ್ಞಾನದ ಕಣ್ಣು ಅರಳದವರಿಂದ ದೇವರು ಆರತಿಯನ್ನು ಸ್ವೀಕರಿಸುವುದಿಲ್ಲ ಭಾವ ಶುದ್ಧಿಯಾಗದವರಿಂದ ಧೂಪವನ್ನು ಸ್ವೀಕರಿಸುವುದಿಲ್ಲ. ಸಂತೃಪ್ತಿ ಮನೋಭಾವ ಇಲ್ಲದವರಿಂದ ದೇವರು ನೈವೇದ್ಯವನ್ನು ಸ್ವೀಕರಿಸುವುದಿಲ್ಲ. ಕೆಲವರು ಸದಾ ಅತೃಪ್ತರು

ಎಷ್ಟಿದ್ದರೂ ಸಮಾಧಾನದಿಂದ ಇರುವುದಿಲ್ಲ. ಶ್ರೀಮಂತಿಕೆ -ಬಡತನದ ವ್ಯಾಖ್ಯಾನವನ್ನು ಹೀಗೆ ಹೇಳಬಹುದು. "ಬೇಕು ಬೇಕು ಎಂಬ ಅತೃಪ್ತಿಯೇ ಬಡತನ. ಸಾಕು ಸಾಕು ಎಂಬ ಸಂತೃಪ್ತಿಯೇ ಶ್ರೀಮಂತಿಕೆ." ಇದ್ದುದರಲ್ಲಿಯೇ 'ದೇವನ ಪ್ರಸಾದ' ಎಂದು ಯಾರು ಸಂತೃಪ್ತರಾಗಿರುವರೋ ಅವರಿಂದ ದೇವರು ನೈವೇದ್ಯವನ್ನು ಸ್ವೀಕರಿಸುವನು. ಕಾಯ-ವಚನ-ಮನ ಎಂಬ ತ್ರಿಕರಣಗಳು ಶುದ್ಧವಿಲ್ಲದಿದ್ದರೆ ದೇವರು ತಾಂಬೂಲವನ್ನು ಸ್ವೀಕರಿಸನು. ಶರೀರವು ಸ್ನಾನದಿಂದ ಸ್ವಚ್ಛವಾಗುವುದು, ಕಾಯಕದಿಂದ ಶುದ್ಧವಾಗುವುದು, ಸದಾಚಾರ- ಸನ್ನಡತೆಯಿಂದ ದಿವ್ಯವಾಗುವುದು. ಹೃದಯ ಕಮಲ ವಿಕಾಸವಾದವರಲ್ಲಿ, ದಯೆ-ಮಾನವೀಯತೆ ಅಳವಟ್ಟವರಲ್ಲಿ ಮಾತ್ರ ದೇವರು ನೆಲೆಸುವನು. ಹೃದಯ ಕಮಲ ಅರಳದವರಲ್ಲಿ ದೇವರು ನೆಲೆಸನು. ಹೀಗಿದ್ದಾಗ "ನನ್ನಲ್ಲಿ ಯಾವ ಗುಣ ಉಂಟೆಂದು ದೇವರು ತಾನಾಗಿ ಬಂದು ನನ್ನ ಕರಸ್ಥಲದಲ್ಲಿ ನೆಲೆಸಿದ್ದಾನೆ." ಎಂದು ಅಕ್ಕನವರು ಸೋಜಿಗ ಪಡುತ್ತಾರೆ. ಲಿಂಗಾಯತನು ಅದೃಷ್ಟವಂತ. ಏಕೆಂದರೆ ಅವರ ಮಗುವಿನ ಜನನವಾಗುತ್ತಲೇ ೫ನೇ ದಿನ, ೧೧ನೇ ದಿನಕ್ಕೆ ಲಿಂಗಧಾರಣೆ ಮಾಡಿಸುತ್ತಾರೆ. ಮಗುವು ಬಯಸುವ ಮುನ್ನವೇ ಲಿಂಗಯ್ಯನು ಬಂದು ದೇಹದ ಮೇಲೆ ಕೂರುವನು. ಎಂತಹ ಅದೃಷ್ಟ! (ಆದರೆ ಇದರ ಮಹತ್ವವನ್ನು ಬಹುಪಾಲು ಆಧುನಿಕ ಲಿಂಗಾಯತರು ತಿಳಿದಿಲ್ಲ. ನಗರೀಕರಣಗೊಂಡ ಅವರು ಉತ್ತಮ ಸಂಪ್ರದಾಯವನ್ನು ಬಿಡುತ್ತಿದ್ದಾರೆ.)

140. ದೇವರ ಹಂಬಲ

ಹಿಂಡನಗಲಿ ಹಿಡಿವಡೆದ ಕುಂಜರ
ತನ್ನ ವಿಂಧ್ಯವ ನೆನೆವಂತೆ ನೆನೆವೆನಯ್ಯಾ
ಬಂಧನಕ್ಕೆ ಬಂದ ಗಿಳಿ ತನ್ನ ಬಂಧುವ ನೆನೆವಂತೆ ನೆನೆವೆನಯ್ಯಾ
ಕಂದಾ, ನೀನಿತ್ತ ಬಾ ಎಂದು ನೀವು ನಿಮ್ಮಂದವ ತೋರಯ್ಯಾ,
ಚೆನ್ನಮಲ್ಲಿಕಾರ್ಜುನದೇವರ ದೇವಾ.

ಬೆಟ್ಟದ ವಾಸಿಯಾದ ಆನೆ ತನ್ನ ಹಿಂಡಿನೊಡನೆ ತಿರುಗುತ್ತಿರುವಾಗ ಹಿಂಡಿನಿಂದ ತಪ್ಪಿಸಿಕೊಂಡ ಒಂದೇ ಒಂದು ಆನೆ ದಿಕ್ಕು ತಪ್ಪಿ ಅಲೆಯುತ್ತಿರುತ್ತದೆ. ಆಗ ಅದಕ್ಕೆ ತನ್ನ ವಿಂಧ್ಯದ ಚಿಂತೆ, ಮತ್ತು ಹಿಂಡಿನ ಚಿಂತೆ. ಯಾವಾಗ ಹಿಂಡನ್ನು ಮತ್ತು ತನ್ನ ಮೂಲಸ್ಥಾನವನ್ನು ಸೇರುವೆನೋ ಎಂಬ ಚಿಂತೆ. ಅದೇ ರೀತಿ ಬಂಧನಕ್ಕೆ ಬಂದ ಗಿಳಿ ತನ್ನ ಗೂಡನ್ನು ತನ್ನ ಬಂಧುಗಳನ್ನು ಕುರಿತೇ ಚಿಂತಿಸುತ್ತದೆ. ಅದೇ ರೀತಿ ದೇವಾ, ನಾನು ನನ್ನ ಆತ್ಮದ ಮೂಲ ಸ್ಥಾನವಾದ ನಿನಗಾಗಿ ಹಂಬಲಿಸುತ್ತಿದ್ದೇನೆ. ಕಂದಾ, ನೀನು ಬಾ ಎಂದು ನಿಮ್ಮ ಸ್ವರೂಪವನ್ನು ತೋರಿಸಿರಿ.

141. ಮುಂದೆ ನೀ ಕರುಣಿಸು

ಒಂದಲ್ಲ ಎರಡಲ್ಲ ಮೂರಲ್ಲ ನಾಲ್ಕಲ್ಲ-
ಎಂಬತ್ತು ನಾಲ್ಕು ಲಕ್ಷಯೋನಿಯೊಳಗೆ
ಬಾರದ ಭವಂಗಳಲ್ಲಿ ಬಂದೆ ಬಂದೆ.
ಉಂಡೆ ಉಂಡೆ ಸುಖಾಸುಖಂಗಳ.

ಹಿಂದಣ ಜನ್ಮ ತಾನೇನಾದಡೆಯೂ ಆಗಲಿ
ಮುಂದೆ ನೀ ಕರುಣಿಸಾ, ಚೆನ್ನಮಲ್ಲಿಕಾರ್ಜುನದೇವರ ದೇವಾ

ಒಂದಲ್ಲ ಎರಡಲ್ಲ ಈ ಆತ್ಮವು ವಿಕಾಸವನ್ನು ಹೊಂದಿ ಮಾನವ ಜನ್ಮಕ್ಕೆ ಬರುವಷ್ಟರಲ್ಲಿ ೮೪ಲಕ್ಷ ಯೋನಿಗಳನ್ನು ದಾಟಿ ಬರುತ್ತದೆ. ಅನೇಕ ಕಷ್ಟಕೋಟಲೆಯನ್ನು ಸಹಿಸಿಕೊಳ್ಳುತ್ತದೆ; ಸುಖದುಃಖಗಳನ್ನು ಅನುಭವಿಸುತ್ತದೆ. "ಹಿಂದಿನ ಜನ್ಮಗಳು ಏನಾದರೂ ಆಗಲಿ, ಈಗ ನಿನ್ನ ಪಾದಕ್ಕೆ ಶರಣಾಗಿದ್ದೇನೆ. ಮುಂದೆ ಅನುಗ್ರಹಿಸು ದೇವಾ." ಎಂದು ಹೇಳುತ್ತಾರೆ ಅಕ್ಕನವರು. ಕರ್ಮಸಿದ್ಧಾಂತವನ್ನು ಪ್ರತಿಪಾದಿಸುವ ವಚನವು ಮನುಷ್ಯ ಜನ್ಮಕ್ಕೆ ಬರುವ ಮೊದಲು ಆತ್ಮವು ೮೪ ಲಕ್ಷ ಯೋನಿಗಳಲ್ಲಿ ಬರುತ್ತದೆ ಎನ್ನುತ್ತದೆ. ದೇವರಿಗೆ ಶರಣಾದರೆ ಹಿಂದಿನ ಜನ್ಮದ ಕರ್ಮವು ನಿವೃತ್ತಿಯಾಗುತ್ತದೆ. ಎಂದು ಹೇಳುತ್ತದೆ.

142. ಮಾನಸಿಕ ಖಿನ್ನತೆ

ಸಟೆ ಹಿರಿದಾಯಿತ್ತು ಇನ್ನೇವೆನ್ನಿನ್ನೇವೆ.
ದಿಟ ಕಿರಿದಾಯಿತ್ತು ಇನ್ನೇವೆನ್ನಿನ್ನೇವೆ.
ಡಂಬಕ ಮಿಗಿಲಾಯಿತ್ತು ಇನ್ನೇವೆನ್ನಿನ್ನೇವೆ.
ನಂಬುಗೆಯೆಯ್ದದಿನ್ನೇವೆನ್ನಿನ್ನೇವೆ.
ಆಮಿಷ ಘನವಾಯಿತ್ತಿನ್ನೇವೆನ್ನಿನ್ನೇವೆ.
ತಾಮಸ ಘನವಾಯಿತ್ತಿನ್ನೇವೆನ್ನಿನ್ನೇವೆ.
ಚೆನ್ನಮಲ್ಲಿಕಾರ್ಜುನ ದೇವರ ದೇವಯ್ಯಾ,
ಭಕ್ತಿಯೆನ್ನಲ್ಲಿಲ್ಲ ಇನ್ನೇವೆನ್ನಿನ್ನೇವೆ.

ಕೆಲವೊಮ್ಮೆ ಸತ್ಯವನ್ನು ಎಷ್ಟು ಹೇಳಿದರೂ ಜನರು ನಂಬದೆ ಸುಳ್ಳೇ ದೊಡ್ಡದಾಗುತ್ತದೆ. ಸತ್ಯವೇ ಕಿರಿದಾಗುತ್ತದೆ. ಅದೇ ರೀತಿ ಡಾಂಭಿಕತನವೇ ಗೆಲ್ಲುತ್ತದೆ. ಎಷ್ಟು ವಾದಿಸಿದರೂ ನಂಬಿಗೆ ಹುಟ್ಟುವುದಿಲ್ಲ. ಹಲವು ಬಗೆಯ ಆಮಿಷಗಳನ್ನು ಒಡ್ಡಿ ಇಟ್ಟುಕೊಂಡ ಆದರ್ಶಗಳನ್ನು ಬಿಡಿಸಲು ಯತ್ನಿಸುತ್ತಾರೆ. ಈ ಎಲ್ಲ ಪರಿಸರದ ಒತ್ತಡದಿಂದ ತಾಮಸ ಪ್ರವೃತ್ತಿ ಹೆಚ್ಚುವುದು; ಭಕ್ತಿಯು ಕುಂದಿದಂತೆ ತೋರುವುದು. ನಾನೇನು ಮಾಡಲಿ ಎಂದು ಸಾಧಕರು ಚಟಪಟಿ ಸುವುದುಂಟು.

143. ಶರಣಾಗತಿ

ಕೋಲ ತುದಿಯ ಕೋಡಗದಂತೆ,
ನೇಣತುದಿಯ ಬೊಂಬೆಯಂತೆ,
ಆಡಿದೆನಯ್ಯಾ ನೀನಾಡಿಸಿದಂತೆ,
ಆನು ನುಡಿದೆನಯ್ಯಾ ನೀ ನುಡಿಸಿದಂತೆ,
ಆನು ಇದ್ದೆನಯ್ಯಾ ನೀನು ಇರಿಸಿದಂತೆ,
ಜಗದ ಯಂತ್ರವಾಹಕ ಚೆನ್ನಮಲ್ಲಿಕಾರ್ಜುನ ದೇವರ ದೇವನು ಸಾಕೆಂಬನ್ನಕ್ಕ.

ಕೋತಿಯನ್ನು ಆಡಿಸುವವರು ಒಂದು ಕೋಲನು ಹಿಡಿದು ಕೋತಿಗೆ ಸೂಚನೆ ಕೊಟ್ಟು ಕೋಲನ್ನು ಹತ್ತಲು ಇಳಿಯಲು ಹೇಳುವರು. ಅವರ ಆಜ್ಞೆಯನ್ನು ಆ ಕೋತಿ ಪಾಲಿಸುತ್ತದೆ. ಅದೇ ರೀತಿ ಸೂತ್ರದ ಬೊಂಬೆಯಾಟ ಆಡಿಸುವವರು, ಅಟ್ಟದ ಮೇಲೆ ಕುಳಿತು ದಾರ

(ಸೂತ್ರ)ಹಿಡಿದು ಬೊಂಬೆಗಳನ್ನು ಕುಣಿಸುವರು. ಹೇಗೆ ಕೋತಿಯು ಆಡಿಸುವವರು ಆಡಿಸುವಂತೆ ಆಡುವುದೋ, ಸೂತ್ರದ ಗೊಂಬೆ ಕುಣಿಸುವವರು ಕುಣಿಸುವಂತೆ ಕುಣಿಯುವುದೋ ಹಾಗೆ ನಾನು ಆಡುವೆನು, ನೀನಾಡಿಸಿದಂತೆ; ನಾನು ನುಡಿಯುತ್ತೇನೆ ನೀನು ನುಡಿಸಿದಂತೆ. ಜಗತ್ತೆಂಬ ಯಂತ್ರದ ವಾಹಕನಾದ ದೇವರೆ ನೀನು 'ಸಾಕು'ಎನ್ನುವವರೆಗೆ ನಾನು ಆಡುತ್ತೇನೆ.

144. ಬಂಧನದಲ್ಲಿಯೇ ಸ್ವಾತಂತ್ರ್ಯ

ನಿನ್ನರಿಕೆಯ ನರಕವೆ ಮೋಕ್ಷನೋಡಯ್ಯಾ
ನಿನ್ನನರಿಯದ ಮುಕ್ತಿಯೆ ನರಕ ಕಂಡಯ್ಯಾ
ನೀನೊಲ್ಲದ ಸುಖವೆ ದುಃಖ ಕಂಡಯ್ಯಾ
ನೀನೊಲಿದ ದುಃಖವೆ ಪರಮಸುಖ ಕಂಡಯ್ಯಾ
ಚೆನ್ನಮಲ್ಲಿಕಾರ್ಜುನದೇವರ ದೇವಯ್ಯಾ,
ನೀ ಕಟ್ಟಿ ಕೆಡಹಿದ ಬಂಧನವೆ ನಿರ್ಬಂಧನವೆಂದಿಪ್ಪೆನು.

"ದೇವಾ, ನಿನ್ನ ಜ್ಞಾನವನ್ನು ಪಡೆದು ನರಕದಲ್ಲಿ ಇದ್ದರೂ ಪರವಾಗಿಲ್ಲ; ಅದೇ ಮೋಕ್ಷ ನಿನ್ನ ಜ್ಞಾನವನ್ನು ಪಡೆಯದ ಮುಕ್ತಿಯೇ ನರಕ ಸದೃಶ. ನಿನಗೆ ಇಷ್ಟವಾಗದ ಸುಖವೇ ದುಃಖ. ನೀನೊಲಿದ ದುಃಖವೇ ಪರಮ ಸುಖವು. ಸಾಕಷ್ಟು ಕಷ್ಟಕೋಟಲೆಗಳಿದ್ದರೂ ದೇವನ ನೆನಹು ಇದ್ದರೆ ಅದು ಪರಮ ಸುಖದ ಸ್ಥಿತಿ. ನಿನ್ನ ಪ್ರೀತಿಯಿಂದ ನೀನು ನನ್ನನ್ನು ಕಟ್ಟಿಹಾಕಿದ್ದೀಯ. ಈ ಬಂಧನವೇ ನನಗೆ ಪರಮ ಸುಖ ನೀಡುವ ಸ್ವಾತಂತ್ರ್ಯವಾಗಿದೆ."

145. ತ್ರೈಮಲಗಳ ನಿವಾರಣೆ

ಎನ್ನ ಕಾಯದ ಕತ್ತಲೆಯ ಕಳೆಯಯ್ಯಾ
ಎನ್ನ ಮಾಯದ ಮದವ ಮುರಿಯಯ್ಯಾ
ಎನ್ನ ಜೀವದ ಜಂಜಡವ ಮಾಣಿಸಯ್ಯಾ
ಎನ್ನ ದೇವ ಚೆನ್ನಮಲ್ಲಿಕಾರ್ಜುನದೇವರ ದೇವಯ್ಯಾ,
ಎನ್ನ ಸುತ್ತಿದ ಮಾಯಾ ಪ್ರಪಂಚವ ಬಿಡಿಸಾ ನಿಮ್ಮ ಧರ್ಮ!

ಆತ್ಮನಿಗೆ ಸುತ್ತಿರುವವು 3 ಮಲಗಳು.

1. ಕಾಯದ ಕತ್ತಲೆಯಾದ ಕಾರ್ಮಿಕ ಮಲ – ಇದು ಸ್ಥೂಲ ಶರೀರವನ್ನು ಆವರಿಸುವುದು
2. ಮಾಯದ ಮದವಾದ ಮಾಯಾಮಲ– ಇದು ಸೂಕ್ಷ್ಮ ಶರೀರವನ್ನು ಆವರಿಸುವುದು
3. ಜೀವದ ಜಂಜಡವಾದ ಆಣವಮಲ– ಇದು ಕಾರಣ ಶರೀರವನ್ನು ಆವರಿಸುವುದು.

ಇವುಗಳಿಂದ ಆತ್ಮನಿಗೆ ಅಲ್ಪ ಶಕ್ತತ್ವ, ಅಲ್ಪಜ್ಞತ್ವ, ಅಲ್ಪ ವ್ಯಾಪಕತ್ವ ಬರುವುವು. ಅಕ್ಕನವರು "ಎನ್ನ ಸುತ್ತಿದ ಮಾಯಾ ಪ್ರಪಂಚವ ಬಿಡಿಸಾ ನಿಮ್ಮ ಧರ್ಮ" ಎಂದು ಅರಮನೆಯ ಬಂಧನ ಬಿಡಿಸಲು ದೇವರಲ್ಲಿ ಪ್ರಾರ್ಥಿಸುತ್ತಲೇ ಆತ್ಮನಿಗೆ ಸುತ್ತಿರುವ ತ್ರೈಮಲಗಳನ್ನು ಬಿಡಿಸಿಕೊಳ್ಳುವ ಸೂತ್ರ ಬೋಧಿಸುತ್ತ ಶ್ರೇಷ್ಠ ತತ್ವಜ್ಞಾನಿಯಾಗಿ ಕಾಣುವರು.

146. ಮಾಯೆಯ ಮಾಣಿಸು

ಎನ್ನ ಕಾಯ ಮಣ್ಣು, ಎನ್ನ ಜೀವ ಬಯಲು,
ಆವುದ ಹಿಡಿವೆನಯ್ಯಾ
ದೇವಾ, ನಿಮ್ಮನಾವ ಪರಿಯಲ್ಲಿ ನೆನೆವೆನಯ್ಯಾ?

ಎನ್ನ ಮಾಯೆಯನ್ನು ಮಾಣಿಸಯ್ಯಾ
ಚೆನ್ನಮಲ್ಲಿಕಾರ್ಜುನ ದೇವರ ದೇವಾ.

ಅಕ್ಕನವರ ವಚನಗಳು ವೈಯಕ್ತಿಕ ಅನುಭವದೊಡನೆ ತಾತ್ವಿಕ ವಿಶ್ಲೇಷಣೆಯನ್ನು ಮೈಗೂಡಿಸಿಕೊಂಡಿವೆ. ಈ ವಚನದಲ್ಲಿ ತಮ್ಮ ಮಾಯೆಯನ್ನು ಮಾಣಿಸು ಎಂದು ದೇವರಲ್ಲಿ ಬೇಡಿಕೊಂಡಿದ್ದಾರೆ. ಜೊತೆಗೆ ಒಂದು ಸೈದ್ಧಾಂತಿಕ ಸೂತ್ರವನ್ನು ಕೊಟ್ಟಿದ್ದಾರೆ. ಶರೀರವು ಮಣ್ಣಿನಿಂದ(ಪೃಥ್ವಿ ತತ್ವ) ಆಗಿದೆ, ಇದು ನಶ್ವರ. ಇದರಲ್ಲಿ ದೇವರನ್ನು ಕಾಣಲು ಸಾಧ್ಯವೆ? ಎಂದು ಸಂದೇಹ ಉಂಟಾಗುತ್ತದೆ. ಇನ್ನು ಆತ್ಮ ನಿರಾಕಾರ ಚೈತನ್ಯ ಬಯಲು. ನಮ್ಮ ಅನುಭವಕ್ಕೆ ಸಿಗಲಾರದುದು. ಯಾವುದರ ಮೇಲೆ ಧ್ಯಾನ ಮಾಡಬೇಕು? ಇದು ಒಂದು ರೀತಿ ದೇವರ ಲೀಲೆ(ಮಾಯೆ). ಈ ನನ್ನ ಮಾಯೆಯನ್ನು ನಿಗ್ರಹಿಸು ಎನ್ನುತ್ತಾರೆ. ಇದು ಸಾಧನೆಯ ಆರಂಭದ ದಿನಗಳಲ್ಲಿ ಹೇಳಿರುವ ಮಾತು. ಏಕೆಂದರೆ ನಂತರದ ದಿನಗಳಲ್ಲಿನ ಅನುಭವವೆಂದರೆ ಕಾಯ-ಜೀವ(ಆತ್ಮ)ದ ಸಂಯೋಗವಾದ ಮಾನವ ಶರೀರವೇ ಸಾಧನವಾಗುವುದು ಎಂಬ ಅರಿವು ಸಾಧಕನಲ್ಲಿ ಉಂಟಾಗುವುದು.

147. ಮಾಯೆಯ ಉಪಟಳ

ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ.
ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ
ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ.
ನೆನಹಿಂಗೆ ಅರುಹಾಗಿ ಕಾಡಿತ್ತು ಮಾಯೆ.
ಅರುಹಿಂಗೆ ಮರಹಾಗಿ ಕಾಡಿತ್ತು ಮಾಯೆ.
ಜಗದ ಜಂಗುಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ.
ಚೆನ್ನಮಲ್ಲಿಕಾರ್ಜುನದೇವರ ದೇವಾ
ನೀನೊಡ್ಡಿದ ಮಾಯೆಯನಾರಿಗೂ ಗೆಲಬಾರದು.

"ಮಾಯೆ" ಎನ್ನುವ ಪರಿಕಲ್ಪನೆ ಬಲು ವಿಶಿಷ್ಟವಾದುದು. ವಚನ ಸಾಹಿತ್ಯ ಸಂವಿಧಾನದ ಪ್ರಕಾರ ಇದು ಪ್ರತ್ಯೇಕವಾದ ವಸ್ತುನಿಷ್ಠ ಅಸ್ತಿತ್ವ ಹೊಂದಿದ ಸತ್ಯವಲ್ಲ. ಬೌದ್ಧ ಧರ್ಮದಲ್ಲಿ ಬರುವ 'ಮಾರ', ಕ್ರೈಸ್ತ-ಇಸ್ಲಾಂ ಧರ್ಮಗಳಲ್ಲಿ ಬರುವ ಸೈತಾನ್, ಹಿಂದು ಪುರಾಣಗಳಲ್ಲಿ ಬರುವ 'ಕಾಮ' ಇವಕ್ಕೆ ವಚನ ಸಾಹಿತ್ಯದ ಮಾಯೆಯನ್ನು ಹೋಲಿಸಬಹುದು. ಇದು ವ್ಯಕ್ತಿಯ ಮನಸ್ಸಿನಲ್ಲಿ ಉದಿಸುವ ಒಂದು ಭಾವ. ಮಾಯೆಯ ವ್ಯಾಖ್ಯಾನವನ್ನು ಅತ್ಯಂತ ಸುಂದರವಾಗಿ, ಖಚಿತವಾಗಿ ಪ್ರಭುದೇವರು ಹೇಳಿದ್ದಾರೆ.

ಹೊನ್ನು ಮಾಯೆ ಎಂಬರು ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆ ಎಂಬರು ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆ ಎಂಬರು ಮಣ್ಣು ಮಾಯೆಯಲ್ಲ
ಮನದ ಮುಂದಣ ಆಸೆಯೆ ಮಾಯೆ ಕಾಣಾ ಗುಹೇಶ್ವರ.

ಮನದ ಒಳಗಿನ ಆಸೆಯೇ ಮಾಯೆ ಎಂದು ಸ್ಪಷ್ಟವಾಗಿ ಹೇಳಿ, ಮಾಯೆಯು ಮನೋಗತವಲ್ಲದೆ ಸೃಷ್ಟಿಗತವಲ್ಲ ಎನ್ನುತ್ತಾರೆ. ಮಾಯೆಯ ವಿಸ್ತಾರ ದೊಡ್ಡದು; ಅದು ಆಸೆಯಾಗಬಹುದು, ಆಮಿಷವಾಗಬಹುದು, ಭ್ರಾಂತಿಯಾಗಬಹುದು, ಮೋಹವಾಗಬಹುದು. ಸಂದರ್ಭಕ್ಕೆ ತಕ್ಕಂತೆ ಈ ಮಾಯೆ ಎಂಬ ಪದಕ್ಕೆ ಅರ್ಥಮಾಡಬೇಕಾಗುತ್ತದೆ.

ಅಕ್ಕನವರ ವಚನವನ್ನು ವಿಶ್ಲೇಷಿಸೋಣ. ಇಲ್ಲಿ ಭ್ರಾಂತಿ ಎಂದು ಮಾಯೆ ಪದಕ್ಕೆ ಅರ್ಥಮಾಡೋಣ. ಶರೀರವನ್ನು ನೆರಳು ಹೇಗೆ ಬೆನ್ನುಹತ್ತಿರುವುದೋ ಹಾಗೆ ಭ್ರಾಂತಿ(ಮಾಯೆ)ಯು ವ್ಯಕ್ತಿಯ ಬೆನ್ನುಹತ್ತಿರುವುದು. ಅದು ಪ್ರಾಣಕ್ಕೆ ಮನವಾಗಿ ಕಾಡುವುದು. "ನನಗೆ ಏನಾಗುವುದೋ? ಸಾಧನೆ ಪೂರ್ಣಗೊಳ್ಳುವ ಮುನ್ನವೇ ಪ್ರಾಣ ಹೋದರೆ." ಎಂದು ಮುಂತಾಗಿ ಮನಸ್ಸು ಆಲೋಚಿಸುವುದು. ಮನಸ್ಸಿಗೆ ಹಳೆಯ ನೆನಪುಗಳು ಬಂದು ರಾಗ-ದ್ವೇಷಗಳು ಉತ್ಪತ್ತಿಯಾಗುವುದು. ಇಲ್ಲಿ ನೆನಹು (ಹಳೆಯ ನೆನಪು) ಮಾಯೆಯಾಗಿರುವುದು. ಈ ನೆನಪಿಗೆ ಹಿಂದಿನ ಅನುಭವಗಳ ಅರಿವು ಕಾರಣವಾಗುವುದು. ಈ ಅರಿವು ಜ್ಞಾನಯುಕ್ತವಲ್ಲ ಅಜ್ಞಾನಯುಕ್ತವಾದುದು. ಈ ಅಜ್ಞಾನಯುಕ್ತ ಅರಿವಿಗೆ ಮರೆವು ಮಾಯೆಯಾಗಿ ಕಾಡುವುದು. ಹೇಗೆಂದರೆ ಹಳೆಯ ಕೆಟ್ಟ ನೆನಪುಗಳು ಚಿತ್ತದ ಸರೋವರದಲ್ಲಿ ರಾಗದ್ವೇಷದ ಅಲೆಗಳನ್ನು ಎಬ್ಬಿಸಿದರೆ, ದೇವರ ಧ್ಯಾನವನ್ನು ಮಾಡದ ಮರೆವು ಮಾಯೆಯಾಗಿ ಕಾಡುವುದು. ಹೀಗೆ ಮಾಯೆಯು ಜಗದ ಜನರಿಗೆ (ಜಂಗುಳಿ-ಹಿಂಡು) ಬೆಂಗೋಲನೆತ್ತಿ (ದನಕಾಯುವವ ಹಿಡಿದಿರುವ ಕಟ್ಟಿಗೆ) ಕಾಡುವುದು. ದೇವಾ, ಇಂಥ ಮಾಯೆಯನ್ನು ಗೆಲ್ಲುವುದು ಸಾಮಾನ್ಯವಲ್ಲ, ಯಾರಿಗೂ ಸಾಧ್ಯವಿಲ್ಲ; ನನಗೂ ಸಹ." ಎನ್ನುವರು ಅಕ್ಕನವರು.

148. ಬಿಟ್ಟುಬಿಡು ಮರುಳೆ

ಎಲುವಿಲ್ಲದ ನಾಲಿಗೆ ಹೊದಕುಳಿಗೊಂಡಾಡುದು,
ಎಲೆ ಕಾಲಂಗೆ ಗುರಿಯಾದ ಕರ್ಮಿ.
ಉಲಿಯದಿರು, ಉಲಿಯದಿರು ಭವಭಾರಿ ನೀನು.
ಹಲವು ಕಾಲದ ಹುಲುಮನುಜಂಗೆ
ಹುಲುಮನುಜ ಹೆಂಡತಿ: ಇವರಿದ್ದರೆ ಅದಕ್ಕದು ಸರಿ.
ಚೆನ್ನಮಲ್ಲಿಕಾರ್ಜುನದೇವರ ದೇವನೆ ಗಂಡನೆನಗೆ
ಲೋಕದೊಳಗ್ಹೆಂಡಿರುಂಟಾದರೆ ಮಾಡಿಕೊ,
ಎನ್ನ ಬಿಡು ಮರುಳೆ.

ಅಕ್ಕನವರು ಕೌಶಿಕನ ಬಂಧನದಲ್ಲಿ ಪಟ್ಟ ಸಂಕಷ್ಟವನ್ನು ನೆನಪಿಸಿಕೊಂಡರೆ ಹೃದಯವು ತಲ್ಲಣಿಸುತ್ತದೆ, ಅಪಾರ ದುಃಖವಾಗಿ ಬರೆಯುವಾಗ ಕಣ್ಣೀರು ಬರುತ್ತವೆ. "ಎಲೈ ರಾಜಾ, ಮೂಳೆಯಿಲ್ಲದ ನಾಲಿಗೆಯನ್ನು ಹೇಗೆಂದರೆ ಹಾಗೆ ಹೊರಳಿಸಬೇಡ. ನಿನ್ನ ದುಷ್ಟ ಕಾರ್ಯದಿಂದ ಕಾಲಂಗೆ (ಸಾವಿಗೆ) ಹತ್ತಿರವಾಗುತ್ತಿರುವ ಕರ್ಮಿ ನೀನು. ನೀನು ಮಾತನಾಡಬೇಡ, ಭವಭಾರಿ ನೀನು. ಸಾಮಾನ್ಯ ಲೌಕಿಕರಿಗೆ ಲೌಕಿಕ ಮನೋಭಾವದ ಹೆಂಡತಿ ಇರಬೇಕು. ಇಬ್ಬರಿಗೂ ಹೊಂದಾಣಿಕೆಯಾಗುತ್ತದೆ. ನಾನೋ ಪರಮಾತ್ಮನಿಗೆ ಒಲಿದವಳು. ಅವನನ್ನು ನನ್ನ ಗಂಡ ಎಂದು ಶರಣಾದವಳು. ಆದ್ದರಿಂದ ಲೋಕದಲ್ಲಿ ಬೇಕಾದಷ್ಟು ಜನ ಹೆಂಗಸರು ಸಿಗುವರು ಅವರನ್ನು ಮದುವೆ ಮಾಡಿಕೊ. ನನ್ನನ್ನು ಬಿಟ್ಟು ಬಿಡು." ಎಂದು ಕೇಳಿಕೊಳ್ಳುವರು.

149. ದೇವರ ಚಿಂತೆ

ಎಮ್ಮೆಗೊಂದು ಚಿಂತೆ; ಸಮಗಾರಗೊಂದು ಚಿಂತೆ.
ಧರ್ಮಿಗೊಂದು ಚಿಂತೆ; ಕರ್ಮಿಗೊಂದು ಚಿಂತೆ.
ಎನಗೆ ಎನ್ನ ಚಿಂತೆ; ತನಗೆ ತನ್ನ ಕಾಮದ ಚಿಂತೆ.
ಒಲ್ಲೆ ಹೋಗು ಸೆರಗ ಬಿಡು ಮರುಳೆ.

ಎನಗೆ ಚೆನ್ನಮಲ್ಲಿಕಾರ್ಜುನದೇವನ ದೇವರು
ಒಲಿವರೊ ಒಲಿಯರೊ ಎಂಬ ಚಿಂತೆ!

ನಾನು ತರಂಗಿಣಿ ಬರೆಯುವ ಕಾಲಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದ ಮಹಾದೇವಿಯಕ್ಕನ ವಚನಗಳನ್ನು ಓದಿ, ಆ ವಚನಗಳನ್ನು ಬಳಸಿಕೊಂಡೆ. ಈಗ ಸರ್ಕಾರ ಪ್ರಕಟಿಸಿರುವ ಸಂಪುಟದಿಂದ ಆಯ್ದುಕೊಂಡ ವಚನಗಳನ್ನು ಸೇರಿಸಿ ಶರಣ.ಸಚ್ಚಿದಾನಂದ ಚಟ್ನಳ್ಳಿ ಅವರು ಸಮಗ್ರ ವಚನಗಳನ್ನು ಸಂಪಾದಿಸಿದ್ದು ನಮ್ಮ ಸಂಸ್ಥೆಯಿಂದಲೇ ಪ್ರಕಟಿಸಿದ್ದೇವೆ. ಲಭ್ಯವಾಗಿರುವ ಹೊಸ ವಚನಗಳನ್ನು ಓದಿದಾಗ ಕೆಲವು ವಿಷಯ ದೃಢಪಡುತ್ತವೆ.

1.ಅಕ್ಕನವರು ವಿವಾಹವಾಗದೆ ಅರಮನೆಯ ಬಂಧನಕ್ಕೆ ಒಳಗಾದರು. ಮೇಲಿನ (148) ವಚನದಲ್ಲಿ ಲೋಕದಲ್ಲಿ ಹೆಂಗಸರು ಲೌಕಿಕ ವಾಂಛೆಯುಳ್ಳವರು ಬೇಕಾದಷ್ಟು ಜನ ಇರುತ್ತಾರೆ. ಅವರನ್ನು ಹೆಂಡಿರನ್ನಾಗಿ ಮಾಡಿಕೋ ಎಂದು ಹೇಳುವ ಮಾತು "ನಾನು ನಿನ್ನ ಹೆಂಡತಿಯಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ.

2.ಕೌಶಿಕನು ಭಾಷೆ ಕೊಟ್ಟಿದ್ದರಿಂದ ಅಕ್ಕನವರು ಅರಮನೆಗೆ ಬಂದಿದ್ದಾರೆ.

3.ವ್ರತಧಾರಿಯಾಗಿ ಬಂದಿದ್ದಾರೆ.

4.ವಿವಾಹವಾದ ಹೆಂಡತಿಯಾಗಿದ್ದರೆ ಒಲ್ಲೆ ಹೋಗು ಸೆರಗ ಬಿಡು ಮರುಳೆ ಎನ್ನುವ ಧೈರ್ಯ ಬರುತ್ತಿರಲಿಲ್ಲ.

5.ಮರುಳೆ ಎನ್ನುವ ಪದದವನ್ನು ಬಹಳಷ್ಟು ಸಲ ಬಳಸಿದ್ದಾರೆ. ವಿವಾಹವಾದ ಹೆಂಡತಿಯಾಗಿದ್ದರೆ ಹೀಗೆ ಬಳಸಲು ಸಾಧ್ಯವಿಲ್ಲ.

ಭಾವಾರ್ಥ:-ಎಮ್ಮೆಗೆ ಹುಲ್ಲನ್ನು ಮೇಯ್ದು ದಷ್ಟಪುಷ್ಟವಾಗಬೇಕೆಂಬ ಚಿಂತೆ; ಸಮಗಾರನಿಗೆ ಎಮ್ಮೆ ಯಾವಾಗ ಸಾಯುತ್ತದೋ, ಅದರ ಮಾಂಸ ತಿನ್ನಲು, ಚರ್ಮವು ಚಪ್ಪಲಿ ಮಾಡಲು ಯಾವಾಗಅವಕಾಶ ಸಿಗುವುದೋ ಎಂಬ ಚಿಂತೆ. ಅದೇ ರೀತಿ ಧರ್ಮವಂತನಿಗೆ ಪುಣ್ಯಕಾರ್ಯ ಮಾಡಲು ಯಾವ ಅವಕಾಶ ಸಿಗುವುದೋ ಎಂಬ ಚಿಂತೆಯಾದರೆ ನೀಚ ಕರ್ಮಿಯು ಕೆಟ್ಟ ಕೆಲಸಗಳನ್ನು ಮಾಡಲು ಹೊಂಚುಹಾಕುತ್ತಿರುವನು. ಹಾಗೆ ನನಗೆ ನನ್ನದೇ ಆದ ಚಿಂತೆ ಬಾಧಿಸುತ್ತಿದ್ದರೆ ತನಗೆ ಕಾಮದ ಚಿಂತೆ ಕಾಡುತ್ತಿದೆ. ನಾನು ನಿನ್ನನ್ನು ಒಲ್ಲೆ; ಹಿಡಿದಿರುವ ಸೆರಗು ಬಿಡು. ನನಗೆ ಪರಮಾತ್ಮನು ಒಲಿಯುವನೋ ಇಲ್ಲವೋ ಎಂಬ ಚಿಂತೆ ಕಾಡುತ್ತಿದೆ.

150. ಪೂಜೆಯ ವೇಳೆ ತಪ್ಪಬಾರದು

ಎಲೆ ಕಾಲಂಗೆ ಸೂರೆಯಾದ ಕರ್ಮಿ,
ಎಲೆ ಕಾಮಂಗೆ ಗುರಿಯಾದ ಮರುಳೆ,
ಬಿಡು ಬಿಡು ಕೈಯ; ನರಕವೆಂದರಿಯದೆ ತಡೆವರೆ ಮನುಜಾ?
ಚೆನ್ನಮಲ್ಲಿಕಾರ್ಜುನದೇವರ ದೇವರ ಪೂಜೆಯ ವೇಳೆ ತಪ್ಪಿದರೆ
ನಾಯಕ ನರಕ ಕಾಣಾ ನಿನಗೆ.

ಕಾಲ ಎಂದರೆ ಸಾವು. ದುಷ್ಟ ಕೆಲಸ ಮಾಡುವವನು ಆಯುಷ್ಯವನ್ನು ಕಳೆದುಕೊಂಡು ಸಾವಿಗೆ ಹತ್ತಿರವಾಗುವನು. ಎಲೆ, ಹೀನ ಕಾರ್ಯದಿಂದ ಸಾವನ್ನು ಬರಮಾಡಿಕೊಳ್ಳುವ ಕುಕರ್ಮಿ, ಕಾಮಾಂಧನಾಗಿರುವ ಹುಚ್ಚ, ನನ್ನ ಕೈಯನ್ನು ಬಿಡು. ನಾನು ಪೂಜೆ ಮಾಡುವುದನ್ನು ತಪ್ಪಿಸಿದರೆ ಅದು ನಿನಗೆ ನರಕಕ್ಕೆ ಕಾರಣವಾಗುವುದು ಎಂಬುದನ್ನು ಅರಿಯೆಯಾ? ನನ್ನ

ಇಷ್ಟಲಿಂಗಾರ್ಚನೆಯ ಪೂಜೆ ತಪ್ಪಿದರೆ ಅದರಿಂದ ಬರುವ ಪಾಪದ ಫಲವಾದ ನರಕ ನಿನಗೇ ಪ್ರಾಪ್ತಿಯಾಗುವುದು.

151. ಅಜ್ಞಾನಿಗಳು ದೇವರನ್ನರಿಯರು

ಅಶನದಿಂದ ಕುದಿದು,
ವ್ಯಸನದಿಂದ ಬೆಂದು,
ಅತಿ ಆಸೆಯಲಿ ಬಳಲಿ,
ವಿಷಯಕ್ಕೆ ಹರಿವ ಜೀವಿಗಳು ನಿಮ್ಮನರಿಯರು.
ಕಾಲಕಲ್ಪಿತ ಪ್ರಳಯ ಜೀವಿಗಳೆಲ್ಲ
ನಿಮ್ಮನೆತ್ತ ಬಲ್ಲರಯ್ಯಾ ಚೆನ್ನಮಲ್ಲಿಕಾರ್ಜುನದೇವರ ದೇವಾ.

ಹಗರಲಿರುಳು ಹೊಟ್ಟೆಯ ಚಿಂತೆ ಮಾಡುವ ಜನರು ಹಸಿವೆಯ ತಾಪದಲ್ಲಿ ಕುದಿವರು, ವ್ಯಸನಗಳ ಜ್ವಾಲೆಯಲ್ಲಿ ಬೇಯುವರು, ಆಸೆಯ ಜಾಲದಲ್ಲಿ ಸಿಕ್ಕಿ ಬಳಲುವರು, ಇಂದ್ರಿಯಗಳ ಚಾಪಲ್ಯಕ್ಕೆ ತುತ್ತಾಗಿ ದೇವರನ್ನರಿಯರು, ಸಾವಿನ ಸೆಳೆತದಲ್ಲಿ ಸಿಕ್ಕಿ ಪ್ರಳಯಕ್ಕೆ ತುತ್ತಾಗುವ ಅಜ್ಞಾನಿಗಳು ಪರಮಾತ್ಮಾ, ನಿಮ್ಮನ್ನು ಹೇಗೆ ಅರಿಯಲು ಸಾಧ್ಯ?

152. ಪೂಜೆಗೆ ಅಡ್ಡಿ ಮಾಡಬಾರದು

ಒಂದರಳ ಶಿವಂಗೆಂದ ಫಲದಿಂದ
ಶಿವಪದಂಗಳಾದುದ ಕೇಳಿಯರಿಯೆಯಾ?
ಒಂದರಳನೇರಿಸುವಲ್ಲಿ ಅಡ್ಡವಿಸಿದರೆ
ಗೊಂದಣದ ಕುಲಕೋಟಿಗೆ ನರಕ ಕಾಣಾ.
ಇಂದು ಚೆನ್ನಮಲ್ಲಿಕಾರ್ಜುನನದೇವನ ವೇಳೆ ತಡೆದಡೆ
ಮುಂದೆ ಬಹ ನರಕಕ್ಕೆ ಕಡೆಯಿಲ್ಲ ಮರುಳೆ.

ಒಂದು ಕಣ್ಣನ್ನು ಹೂವಿನಂತೆ ಶಿವನಿಗೆ ಅರ್ಪಿಸಿದ ಫಲದಿಂದ ಬೇಡರ ಕಣ್ಣಪ್ಪನಿಗೆ ಕೈಲಾಸದಲ್ಲಿ ಶಿವಪದವು ಪ್ರಾಪ್ತಿಯಾಯಿತು. ಪೂಜಾ ಸಮಯದಲ್ಲಿ ಒಂದು ಹೂವನ್ನು ಏರಿಸುವಾಗ ಅಡ್ಡ ಬಂದರೆ ಅಡ್ಡಬಂದವನಿಗೆ ಮಾತ್ರವಲ್ಲ ಅವನ ಕುಲಕೋಟಿಗೆ ಸಹ ನರಕವು ಪ್ರಾಪ್ತಿಯಾಗುತ್ತದೆ. ಲಿಂಗದೇವನ ಪೂಜೆಯ ವೇಳೆಯಲ್ಲಿ ನನಗೆ ಅಡ್ಡ ಬಂದರೆ ಮುಂದೆ ಘೋರವಾದ ನರಕ ಪ್ರಾಪ್ತಿಯಾಗುತ್ತದೆ.

153. ಹಸಿವೆ ಒಂದು ಅಡ್ಡಿ

ಆವಾಗಳೂ ಎನ್ನ ಮನ ಉದರಕ್ಕೆ ಹರಿವುದು.
ಕಾಣಲಾರೆನಯ್ಯಾ ನಿಮ್ಮುವ ಭೇದಿಸಲರಿಯೆ.
ಮಾಯದ ಸಂಸಾರದಲ್ಲಿ ಸಿಲುಕಿದೆನು.
ಎನ್ನ ದೇವ ಚೆನ್ನಮಲ್ಲಿಕಾರ್ಜುನದೇವರ ದೇವಯ್ಯಾ,
ನಿಮ್ಮ ಹೊದ್ದುವಂತೆ ಮಾಡಾ, ನಿಮ್ಮ ಧರ್ಮ.

ಯಾವಾಗಲೂ ಮನಸ್ಸು ಹೊಟ್ಟೆಯ ಬಗ್ಗೆಯೇ ಚಿಂತಿಸುವುದು. ಈ ತುತ್ತಿನ ಚೀಲ ತುಂಬುವುದೇ ಇಲ್ಲ. ಬೆಳಿಗ್ಗೆ ಉಪಾಹಾರ, ಮಧ್ಯಾಹ್ನ ಊಟ, ರಾತ್ರಿಯ ಊಟ ಹೀಗೆ ಹೊಟ್ಟೆಯ ಬೇಡಿಕೆ ನಿರಂತರ. ಹೀಗಾಗಿ ದೇವಾ, ಈ ಮನಸ್ಸು ಉದರದ ಕಡೆಗೆ ಕೊಡುವಷ್ಟು

ಗಮನವನ್ನು ನಿಮ್ಮ ಕಡೆಗೆ ಕೊಡುವುದಿಲ್ಲ. ಹಸಿವೆ ಎಂಬ ಮಾಯದ ಜಂಜಾಟದಲ್ಲಿ ಸಿಲುಕಿದೆನು. ದೇವಾ, ನಿಮ್ಮನ್ನು ಹೊದ್ದುವಂತೆ ಮಾಡಾ ನಿಮ್ಮ ಧರ್ಮ." ಎಂದು ಅಕ್ಕನವರು ದೇವನಲ್ಲಿ ಬೇಡಿಕೊಳ್ಳುತ್ತಾರೆ.

154. ಶರಣರ ದರ್ಶನಕ್ಕೆ ಹಂಬಲ

ತೋರಿಸೈ ಗುರುನಾಥನೆ । ಲಿಂಗವನು
ಸೂರೆಗೊಂಡಿಹ ಶರಣರ ॥ಪಲ್ಲವಿ॥
ಚಕಿತಮಭಿದತ್ತೇ ಎಂಬ ಶ್ರುತಿತತಿಗೆ
ಮುಖಗೊಡದ ಘನಲಿಂಗವ
ಸಕಲ ಕರಣಂಗಳೊಳಗೆ ನೆರೆ ತಾಳ್ದ
ಅಕಳಂಕ ಶರಣರಡಿಯ ॥ ೧ ॥
ಸ್ಪಟಿಕ ಪ್ರಕಾಶದಂತೆ । ಸಲೀಲದಿಂ
ನಟಿಸಿದಾಕಾರದಂತೆ॥
ವಟವೃಕ್ಷ ಬೀಜದಂತೆ ।ಲಿಂಗದಲಿ
ಪಟುವಾಗಿ ರಾಜಿಸುವರ ॥ ೨ ॥
ಶರಧಿಯು ಸಲಿಲ ವರ್ಷದ । ರೂಪದಿಂ
ದಿರದೆ ಪ್ರವಾಹವಾಗಿ।
ಬೆರೆದಂತೆ ತತ್‌ಶರಧಿಯು । ಚೆನ್ನಮಲ್ಲನೊಳು
ಬೆರೆದ ನಿಜಲಿಂಗೈಕ್ಯರ॥ ॥ ೩ ॥

ಲಿಂಗದೇವನನ್ನು ತಮ್ಮ ಹೃದಯದಲ್ಲಿ ಸೂರೆ ಮಾಡಿಕೊಂಡಿರುವ ಶರಣರನ್ನು ನನಗೆ ತೋರಿಸು ಗುರುನಾಥನೆ ॥ ಪಲ್ಲವಿ ॥

1. ಪರಮಾತ್ಮನ ಸ್ವರೂಪವನ್ನು ಅರಿಯಲಾರದೆ ಮೂಕ ವಿಸ್ಮಿತವಾಗಿ ನಿಂತಿರುವ ಶ್ರುತಿಗಳ ಮಾತುಕೇಳದೆ ಆ ಲಿಂಗದೇವನನ್ನು ತಮ್ಮ ಸರ್ವ ಇಂದ್ರಿಯಗಳಲ್ಲೂ ತುಂಬಿಕೊಂಡ ಕಳಂಕವಿಲ್ಲದ, ಪವಿತ್ರಾತ್ಮರಾದ ಶರಣರ ಪಾದಗಳನ್ನು ತೋರಿಸು।
2. ಸ್ಫಟಿಕದ ಸಲಾಕೆಯಂತೆ ಪರಿಶುದ್ಧವಾಗಿ, ಪಾರದರ್ಶಕವಾಗಿ ಇರುವ, ನೀರು ತಾನು ಆಶ್ರಯಿಸಿದ ಪಾತ್ರೆಯ ಆಕಾರವನ್ನು ತಾಳುವಂತೆ ಜಗತ್ತಿನಲ್ಲಿ ಇದ್ದುಕೊಂಡು, ಆಲದ ಮರದ ಬೀಜವು ತನ್ನೊಳಗೆ ಬೃಹತ್ ವೃಕ್ಷವನ್ನು ಅಡಗಿಸಿಕೊಂಡಂತೆ ಲಿಂಗದೇವನನ್ನು ಅಡಗಿಸಿಕೊಂಡು ರಾರಾಜಿಸುವ ಶರಣರನ್ನು ತೋರಿಸು॥
3. ಸಮುದ್ರದ ನೀರು ಆವಿಯಾಗಿ ಮೇಲೇರಿ ಪುನಃ ಮಳೆಯ ರೂಪದಲ್ಲಿ ನೆಲಕ್ಕೆ ಬಿದ್ದು ಪ್ರವಾಹವಾಗಿ ಹರಿದು ಪುನಃ ಶರಧಿಯನ್ನೇ ಸೇರಿದಂತೆ ಲಿಂಗದೇವನೆಂಬ ಶರಧಿಯನ್ನು ಬೆರೆದು ಲಿಂಗೈಕ್ಯರಾದ ಶರಣರನ್ನು ತೋರಿಸು ಗುರುನಾಥನೆ ॥

155. ಗುರುವಿಗೆ ನಮನ

ನಿತ್ಯವೆನ್ನ ಮನೆಗೆ ನಡೆದು ಬಂದಿತ್ತಿಂದು,
ಮುಕ್ತಿ ಎನ್ನ ಮನೆಗೆ ನಡೆದು ಬಂದಿತ್ತಿಂದು,

ಜಯ ಜಯಾ, ಹರ ಹರಾ, ಶಂಕರ ಶಂಕರ
ಗುರುವೆ ನಮೋ, ಪರಮಗುರುವೆ ನಮೋ.
ಚೆನ್ನಮಲ್ಲಿಕಾರ್ಜುನದೇವರ ದೇವನ
ತೋರಿದ ಗುರುವೆ ನಮೋ ನಮೋ.

ಒಮ್ಮೆ ಅಕ್ಕನವರ ಮನೆಗೆ ಗುರುಲಿಂಗದೇವರು ಬಂದಾಗ ಹರ್ಷಭರಿತರಾಗಿ ಅವರು ಗುರುವಿಗೆ ನಮನ ಸಲ್ಲಿಸುತ್ತಿದ್ದಾರೆ. ಗುರುವು ಪರಮಾತ್ಮನ ಸಾಕಾರ ಪ್ರತಿನಿಧಿ. ಅವನು ಪರಮಪೂಜ್ಯನು. "ನಿತ್ಯ ಸ್ವರೂಪನಾದ ಗುರುವು ಬಂದಿದ್ದಾನೆ. ಮುಕ್ತಿಯ ಮೂರುತಿ ನಡೆದು ಬಂದಿದ್ದಾನೆ. ಜಯ ಜಯಾ, ಹರ ಹರಾ, ಶಂಕರ ಗುರುವೆ ನಿನಗೆ ನಮಿಸುವೆ. ಪರಮ ಗುರುವೆ. ದೇವರ ನಿಜ ಸ್ವರೂಪವನ್ನು ತಿಳಿಸಿಕೊಟ್ಟ ಗುರುವೆ ನಿಮಗೆ ನಮೋ.

156. ಗುರುವು ದೇವರ ಪ್ರತಿನಿಧಿ

ಕಂಡಡೆ ಒಂದು ಸುಖ, ಮಾತನಾಡಿದಡೆ ಅನಂತಸುಖ.
ನೆಚ್ಚಿಮೆಚ್ಚಿದಡೆ ಕಡೆಯಿಲ್ಲದ ಹರುಷ.
ಮಾಡಿದ ಸುಖವನಗಲಿದರೆ ಪ್ರಾಣದ ಹೋಕು ಕಂಡಯ್ಯಾ
ಚೆನ್ನಮಲ್ಲಿಕಾರ್ಜುನದೇವರ ದೇವಯ್ಯಾ,
ನಿಮ್ಮ ತೋರಿದ ಶ್ರೀಗುರುವಿನ ಪಾದವ ನೀನೆಂದು ಕಾಂಬೆನು.

ಜ್ಞಾನಿಗಳಾದ ಗುರುಗಳ ದರ್ಶನ ಅತ್ಯಂತ ಸುಖಕಾರಕ. ದರ್ಶನ ಮಾತ್ರದಿಂದಲೇ ಅನೇಕ ಸಂದೇಹಗಳು ಪರಿಹಾರಗೊಳ್ಳುವವು. ಇನ್ನು ಅವರೊಡನೆ ಮಾತನಾಡಿದರೆ ಇನ್ನೂ ಹೆಚ್ಚಿನ ಸಂತೋಷ. ಗುರು ಶಿಷ್ಯ ಸಂಬಂಧ ಇನ್ನೂ ಆತ್ಮೀಯವಾಗಿದ್ದರೆ ಆ ಹರುಷಕ್ಕೆ ಕಡೆಯೇ ಇಲ್ಲ. ಇಂಥ ಗುರುವನ್ನು ಅಗಲಬೇಕಾಗಿ ಬಂದರೆ ಪ್ರಾಣವೇ ಹೋದಂತೆ ಆಗುತ್ತದೆ. ದೇವಾ, ನಿಮ್ಮ ಸ್ವರೂಪವನ್ನು ಪರಿಚಯ ಮಾಡಿಕೊಟ್ಟ ಶ್ರೀಗುರುವಿನ ಪಾದವನ್ನು ನೀವೆಂದೇ ಕಾಂಬೆನು.

ಅಕ್ಕನವರು ಅರಮನೆಯ ಬಂಧನ ಕಳಚಿಕೊಂಡು ಉಡುತಡಿಯಿಂದ ಹೊರಡುವಾಗ ಗುರುಲಿಂಗದೇವರ ದರ್ಶನ ಪಡೆದು ಗುರುಗಳಿಗೆ ಧನ್ಯವಾದ ಅರ್ಪಿಸುವ ವಚನವಿದೆಂದು ಊಹಿಸಬಹುದು.

157. ಗುರುಪಾದವ ಕಂಡು ಧನ್ಯಳಾದೆ

ಅರಲುಗೊಂಡ ಕೆರೆಗೆ ತೊರೆಬಂದು ಹಾಯ್ದಂತಾಯಿತ್ತು.
ಬರಲುಗೊಂಡ ಸಸಿಗೆ ಮಳೆ ಸುರಿದಂತಾಯಿತ್ತು ನೋಡಾ ಇಂದೆನಗೆ.
ಇಹದ ಸುಖ ಪರದ ಗತಿ ನಡೆದು ಬಂದಂತಾಯಿತ್ತು ನೋಡಾ ಎನಗೆ.
ಚೆನ್ನಮಲ್ಲಿಕಾರ್ಜುನದೇವರ ದೇವಯ್ಯಾ,
ಗುರುಪಾದವ ಕಂಡು ಧನ್ಯಳಾದೆ ನೋಡಾ.

ಬಿರುಬಿಸಲಿನಿಂದ ಕೆರೆಯುಬತ್ತಿದಾಗ ಒಣಗಿ ನಿಂತು ಬಿಡುತ್ತದೆ. ದೊಡ್ಡ ದೊಡ್ಡ ಸೀಳು(ಬಿಡು)ಬಿಡುತ್ತವೆ. ಕೆರೆಯ ನೀರನ್ನು ಆಶ್ರಯಿಸಿದ ಜಾನುವಾರುಗಳೂ ನೀರಿಲ್ಲದೆ

ಬಾಯಿಬಿಡುತ್ತವೆ. ಇಂಥ ಅರಲುಗೊಂಡ ಕೆರೆಗೆ ನೀರಿನ ಪ್ರವಾಹ ನುಗ್ಗಿ ಬಿಟ್ಟರೆ ಅದು ತುಂಬಿ ತುಳುಕುತ್ತದೆ. ನೀರಿಲ್ಲದೆ ಬರಲಾಗಿ ನಿಂತ ಸಸಿಗೆ ಮಳೆ ಸುರಿದುಬಿಟ್ಟರೆ ಅದು ನಳನಳಿಸುತ್ತದೆ. ಇಹಲೋಕದಲ್ಲಿ ಅಪಾರ ಸುಖ, ಪಾರಲೌಕಿಕ ಮಾರ್ಗ ತೋರುವ ಗುರುವು ನಡೆದು ಬಂದರು. ಗುರುಪಾದವ ಕಂಡು ಧನ್ಯಳಾದೆನು." ಕೌಶಿಕನ ಅರಮನೆಯ ಬಂಧನದಲ್ಲಿ ಅಕ್ಕನವರು ಇದ್ದಾಗ ಒಮ್ಮೆ ಗುರುಲಿಂಗದೇವರು ಬರುವರು. ಆಗ ಈ ವಚನ ಹೇಳಿದಂತೆ ಭಾಸವಾಗುತ್ತದೆ.

158. ತನ್ಮಯತೆಯಿಂದ ಪೂಜೆ

ಇಂದೆನ್ನ ಮನೆಗೆ ಒಡೆಯರು ಬಂದಡೆ,
ತನುವೆಂಬ ಕಳಶದಲುದಕವ ತುಂಬಿ
ಕಂಗಳ ಸೋನೆಯೊಡನೆ ಪಾದಾರ್ಚನೆಯ ಮಾಡುವೆ.
ನಿತ್ಯಶಾಂತಿಯೆಂಬ ಶೈತ್ಯದೊಡನೆ ಸುಗಂಧವ ಪೂಸುವೆ.
ಅಕ್ಷಯ ಸಂಪದವೆಂದರಿದು ಅಕ್ಷತೆಯನೇರಿಸುವೆ.
ಹೃದಯಕಮಲ ಪುಷ್ಪದೊಡನೆ ಪೂಜೆಯ ಮಾಡುವೆ.
ಸದ್ಭಾವದೊಡನೆ ಧೂಪವ ಬೀಸುವೆ.
ಶಿವಜ್ಞಾನ ಪ್ರಕಾಶದೊಡನೆ ಮಂಗಳಾರತಿಯನೆತ್ತುವೆ,
ನಿತ್ಯತೃಪ್ತಿಯೊಡನೆ ನೈವೇದ್ಯವ ಕೈಕೊಳಿಸುವೆ
ಪರಿಣಾಮದೊಡನೆ ಕರ್ಪೂರ ವೀಳೆಯ ಕೊಡುವೆ.
ಪಂಚಬ್ರಹ್ಮದೊಡನೆ ಪಂಚಮಹಾವಾದ್ಯವ ಕೇಳಿಸುವೆ.
ಹರುಷದೊಡನೆ ನೋಡುವೆ,
ಆನಂದದೊಡನೆ ಕುಣಿ ಕುಣಿದಾಡುವೆ.
ಪರವಶದೊಡನೆ ಹಾಡುವೆ, ಭಕ್ತಿಯೊಡನೆ ಎರಗುವೆ.
ನಿತ್ಯದೊಡನೆ ಕೂಡಿ ಆಡುವೆ.
ಚೆನ್ನಮಲ್ಲಿಕಾರ್ಜುನದೇವರ ದೇವಾ
ನಿಮ್ಮ ನಿಲವ ತೋರಿದ ಗುರುವಿನಡಿಯಲ್ಲಿ ಅರಗಾಗಿ ಕರಗುವೆ.

ಒಡೆಯರು ಎಂಬುದರ ಅರ್ಥ ಜಂಗಮರು ಎಂದಾಗಬಹುದು; ಗುರುಗಳನ್ನು ಒಡೆಯರು ಎಂದಿರಬಹುದು. ಗುರು-ಜಂಗಮರ ಪಾದಪೂಜೆಯನ್ನು ಮಾಡುವ ವಿಧಾನವನ್ನು ಇಲ್ಲಿ ಹೇಳಲಾಗಿದೆ. ಪಾದಕ್ಕೆ ನೀರೆರೆದು. ಭಸ್ಮವನ್ನು ಧರಿಸಿ ಗಂಧವನ್ನು ಪೂಸಿ, ಅಕ್ಷತೆಯನ್ನು ಏರಿಸಲಾಗುವುದು. ನಂತರ ಪುಷ್ಪಗಳನ್ನು ಇಡಲಾಗುವುದು. ಧೂಪವನ್ನು ಬೀಸಿ, ಮಂಗಳಾರತಿಯನ್ನು ಎತ್ತಲಾಗುವುದು. ನಂತರ ಪ್ರಸಾದದ ನೈವೇದ್ಯವನ್ನು ಮಾಡಿ ಆರೋಗಣೆ ನಂತರ ತಾಂಬೂಲವನ್ನು ನೀಡಲಾಗುವುದು. ನಂತರ ಗುರು-ಜಂಗಮರ ಸನ್ನಿಧಿಯಲ್ಲಿ ಸಂಗೀತಗೋಷ್ಠಿ. ಭಕ್ತರೆಲ್ಲ ಭಜನೆ ಮಾಡುತ್ತ ಪರವಶರಾಗಿ ನರ್ತಿಸುವರು. ಹೀಗೆ ಭೌತಿಕವಾಗಿ

ಗುರು-ಜಂಗಮ ಪೂಜೆ ನಡೆಯುವುದು (ತಮಿಳುನಾಡಿನ ಊಟಿಯ ಶರಣರಲ್ಲಿ ಈ ಎಲ್ಲ ಆಚರಣೆ ಇದೆ. ಅವರು ಮೃದುವಾಗಿ ಭಾವಪೂರ್ಣವಾಗಿ ನರ್ತಿಸುವರು).

ಭೌತಿಕವಾಗಿ ಗುರು(ಜಂಗಮ)ಪಾದ ಪೂಜೆ ಮಾಡುವ ಅಕ್ಕನವರು ಮಾನಸಿಕವಾಗಿ ಸಹ ಹೀಗೆ ಮಾಡುವರು. ಶರೀರ ಎಂಬ ಕಲಶ, ಕಣ್ಣಿನಲ್ಲಿ ಆನಂದ ಬಾಷ್ಪ ಸುರಿಸುವುದೇ ಮಜ್ಜನ (ಅಭಿಷೇಕ), ಶಾಂತಿ ಗುಣ ಎಂಬ ಗಂಧ ಲೇಪನ, ಎಲ್ಲವೂ ವೃದ್ಧಿಯಾಗಲಿ (ಅಕ್ಷಯವಾಗಲಿ) ಎಂಬ ಭಾವದ ಅಕ್ಷತೆ, ಹೃದಯ ಕಮಲವೇ ಪುಷ್ಪ, ಸದ್ಭಾವವೆ ಧೂಪ, ಜ್ಞಾನಪ್ರಕಾಶದ ಆರತಿ, ನಿತ್ಯ ತೃಪ್ತಿ ಎಂಬ ನೈವೇದ್ಯ, ಪರಿಣಾಮ- ಸಂತೃಪ್ತಿ ಎಂಬ ಕರ್ಪೂರ ಸಹಿತ ತಾಂಬೂಲ, ಗುರು-ಲಿಂಗ-ಜಂಗಮ-ಪಾದೋದಕ-ಪ್ರಸಾದ ಎಂಬ ಪಂಚ ಆಚರಣೆಯ ವಾದ್ಯಗಾಯನ. ಆನಂದದ ನರ್ತನ, ಪರವಶತೆಯಿಂದ ಹಾಡುವಿಕೆ. ಭಕ್ತಿಯಿಂದ ಪಾದಕ್ಕೆ ಎರಗಬೇಕು. ಎರಡೂ ಹಸ್ತಗಳನ್ನು ಗುರುಗಳ ಹೆಬ್ಬೆರಳ ಕೆಳಗೆ ಇಟ್ಟು ಹಣೆಯನ್ನು ಹೆಬ್ಬೆರಳಿಗೆ ಮುಟ್ಟಿಸಿ ನಮಸ್ಕರಿಸಬೇಕು. ಪರಮ ಸತ್ಯವೂ, ನಿತ್ಯವೂ ಆದ ಪರಮಾತ್ಮನ ಜೊತೆಗೆ ಕೂಡಿ ಆಡಬೇಕು. ಪರಮಾತ್ಮ ಲಿಂಗದೇವನ ಸ್ವರೂಪವನ್ನು ತಿಳಿಸಿಕೊಟ್ಟ ಗುರುವಿನ ಅಡಿಯಲ್ಲಿ ಅರಗಿನಂತೆ ಕರಗಬೇಕು. ಇದೇ ಶ್ರೇಷ್ಠ ಪೂಜೆ.

159. ಜಯ ಜಯ ಗುರುವೆ

ಅರಸಿ ಮೊರೆವೊಕ್ಕಡೆ ಕಾವ ಗುರುವೆ,
ಜಯ ಜಯ ಗುರುವೆ.
ಆರೂ ಅರಿಯದ ಬಯಲೊಳಗೆ ಬಯಲಾಗಿ ನಿಂದ ನಿಲವ
ಹಿಡಿದೆನ್ನ ಕರದಲ್ಲಿ ತೋರಿದ ಗುರುವೆ,
ಚೆನ್ನಮಲ್ಲಿಕಾರ್ಜುನದೇವರ ದೇವಾ, ಗುರುವೆ, ಜಯ ಜಯ ಗುರುವೆ.

ಸದ್ಗುರು-ಜ್ಞಾನ ಆಚಾರ ಸಂಪನ್ನನಾದ ಗುರುಬೇಕೆಂದು ಅರಸುತ್ತಲಿರುವಾಗ, ಅಂಥ ಗುರುವನ್ನು ಕಂಡಾಗ ಅವರ ಮೊರೆ ಹೋಗಬೇಕು. ಹಾಗೆ ಮೊರೆಹೊಕ್ಕಾಗ ಕಾಯುವಂಥ ಗುರುವೆ, ನಿನಗೆ ಜಯವಾಗಲಿ. ಮಾನವರ ಅರಿವಿಗೆ ಅಸಾಧ್ಯವಾದ ಬಯಲ ಸ್ವರೂಪವಾದ ಪರಮಾತ್ಮ ಲಿಂಗದೇವನನ್ನು ಚುಳುಕಾಗಿಸಿ, ಇಷ್ಟಲಿಂಗ ರೂಪದಲ್ಲಿ ಹಿಡಿದುಕೊಟ್ಟ ಗುರುವೆ. ನಿನಗೆ ಜಯವಾಗಲಿ. ಗುರುವು ಆಶ್ರಯಕ್ಕೆ ಬಂದವರನ್ನು ರಕ್ಷಿಸುವನು. ದೇವರ ಸ್ವರೂಪ ತಿಳಿಸಿಕೊಡುವನು. ನಿರಾಕಾರ ದೇವರನ್ನು ಇಷ್ಟಲಿಂಗ ರೂಪದಲ್ಲಿ ಚುಳುಕಾಗಿಸಿ ವೇಧಾ, ಮಂತ್ರ, ಕ್ರಿಯಾ ದೀಕ್ಷೆಯಿಂದ ಉದ್ಧರಿಸುವನು. ಇಂಥ ಗುರುವಿಗೆ ಜಯವಾಗಲಿ

160. ಜಂಗಮ ಸೇವೆ ಭಕ್ತನ ಕರ್ತವ್ಯ

ನಾನು ಮಜ್ಜನಕ್ಕೆ ಮಾಡುವ ಮುನ್ನವೆ
ಜಂಗಮಕ್ಕೆ ಮಜ್ಜನವ ಮಾಡಿಸುವೆ.
ನಾನು ಸೀರೆಯನುಡುವುದಕ್ಕೆ ಮುನ್ನವೆ
ಜಂಗಮಕ್ಕೆ ದೇವಾಂಗವನುಡಿಸುವೆ.
ನಾನು ಪರಿಮಳವ ಲೇಪಿಸುವುದಕ್ಕೆ

ಮುನ್ನವೆ ಜಂಗಮಕ್ಕೆ ಸುಗಂಧ ದ್ರವ್ಯಂಗಳ ಲೇಪಿಸುವೆ.
ನಾನು ಅಕ್ಷತೆಯನಿಡುವುದಕ್ಕೆ ಮುನ್ನವೆ
ಜಂಗಮಕ್ಕೆ ಅಕ್ಷತೆಯನಿಡುವೆ.
ನಾನು ಪುಷ್ಪವ ಮುಡಿವುದಕ್ಕೆ ಮುನ್ನವೆ
ಜಂಗಮಕ್ಕೆ ಪರಿಮಳ ಪುಷ್ಪವ ಮುಡಿಸುವೆ.
ನಾನು ಧೂಪವಾಸನೆಯ ಕೊಳ್ಳುವ ಮುನ್ನವೆ
ಜಂಗಮಕ್ಕೆ ಧೂಪವಾಸನೆಯ ಕೊಡುವೆ
ನಾನು ದೀಪಾರತಿಯ ನೋಡುವ ಮುನ್ನವೆ
ಜಂಗಮಕ್ಕೆ ಆರತಿಯ ನೋಡಿಸುವೆ.
ನಾನು ಸಕಲ ಪದಾರ್ಥಂಗಳ ಸ್ವೀಕರಿಸುವ ಮುನ್ನವೆ
ಜಂಗಮಕ್ಕೆ ಮೃಷ್ಟಾನ್ನವ ನೀಡುವೆ.
ನಾನು ಪಾನಂಗಳ ಕೊಳ್ಳುವ ಮುನ್ನವೆ
ಜಂಗಮಕ್ಕೆ ಅಮೃತ ಪಾನಂಗಳ ಕೊಡುವೆ.
ನಾನು ಕೈಯ ತೊಳೆಯುವ ಮುನ್ನವೆ
ಜಂಗಮಕ್ಕೆ ಹಸ್ತಪ್ರಕ್ಷಾಲನವ ಮಾಡಿಸುವೆ.
ನಾನು ವೀಳೆಯವ ಮಾಡುವುದಕ್ಕೆ ಮುನ್ನವೆ
ಜಂಗಮಕ್ಕೆ ತಾಂಬೂಲವ ಕೊಡುವೆ.
ನಾನು ಗದ್ದುಗೆಯ ಮೇಲೆ ಕುಳ್ಳಿರುವುದಕ್ಕೆ ಮುನ್ನವೆ
ಜಂಗಮಕ್ಕೆ ಉನ್ನತಾಸನವನಿಕ್ಕುವೆ.
ನಾನು ಸುನಾದಂಗಳ ಕೇಳುವುದಕ್ಕೆ ಮುನ್ನವೆ
ಜಂಗಮಕ್ಕೆ ಸುಗೀತವಾದ್ಯಂಗಳ ಕೇಳಿಸುವೆ.
ನಾನು ಭೂಷಣಂಗಳ ತೊಡುವುದಕ್ಕೆ ಮುನ್ನವೆ
ಜಂಗಮಕ್ಕೆ ಆಭರಣಂಗಳ ತೊಡಿಸುವೆ.
ನಾನು ವಾಹನಂಗಳ ನೇರುವುದಕ್ಕೆ ಮುನ್ನವೆ
ಜಂಗಮಕ್ಕೆ ವಾಹನಂಗಳನೇರಿಸುವೆ.
ನಾನು ಮನೆಯೊಳಗಿಹುದಕ್ಕೆ ಮುನ್ನವೆ
ಜಂಗಮಕ್ಕೆ ಗೃಹವ ಕೊಡುವೆ.
ಇಂತೀ ಹದಿನಾರು ತೆರದ ಚರಲಿಂಗಕ್ಕೆ ಕೊಟ್ಟು
ಆ ಚರಲಿಂಗ ಮೂರ್ತಿ ಭೋಗಿಸಿದ ಬಳಿಕ
ನಾನು ಪ್ರಸಾದ ಮುಂತಾಗಿ ಭೋಗಿಸುವೆನಲ್ಲದೆ
ಜಂಗಮವಿಲ್ಲದೆ ಇನಿತರೊಳೊಂದು ಭೋಗವನಾದಡೂ
ನಾನು ಭೋಗಿಸಿದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ.

ಇಂತೀ ಕ್ರಮದಲ್ಲಿ ನಡೆವಾತಂಗೆ ಗುರುವುಂಟು ಲಿಂಗವುಂಟು
ಜಂಗಮವುಂಟು, ಪಾದೋದಕವುಂಟು ಪ್ರಸಾದವುಂಟು ಆಚಾರವುಂಟು,
ಭಕ್ತಿಯುಂಟು,
ಈ ಕ್ರಮದಲ್ಲಿ ನಡೆಯದಾತಂಗೆ
ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪ್ರಾದೋದಕವಿಲ್ಲ, ಪ್ರಸಾದವಿಲ್ಲ
ಆಚಾರವಿಲ್ಲ ಭಕ್ತಿಯಿಲ್ಲ, ಅವನ ಬಾಳುವೆ ಹಂದಿಯ ಬಾಳುವೆ,
ಅವನ ಬಾಳುವೆ ನಾಯ ಬಾಳುವೆ, ಅವನ ಬಾಳುವೆ ಕತ್ತೆಯ ಬಾಳುವೆ,
ಅವನು ಸುರೆಮಾಂಸ ಭುಂಜಕನು. ಅವನು ಸರ್ವಚಾಂಡಾಲನಯ್ಯಾ,
ಚೆನ್ನಮಲ್ಲಿಕಾರ್ಜುನದೇವರ ದೇವಾ

ಇದು ನಂತರದಲ್ಲಿ ಸೇರಿಸಲ್ಪಟ್ಟ ಕೃತಕ ವಚನವಿರಬೇಕೆಂದು ಅನ್ನಿಸುತ್ತದೆ. ಏಕೆಂದರೆ ಸಾಂಪ್ರದಾಯಿಕವಾಗಿ ಕೆಲವು ಆಚರಣೆಗಳಿವೆ. ಗುರು ಜಂಗಮರು ಬಂದಾಗ ಮನೆಯ ಒಡೆಯ ಮತ್ತು ಒಡತಿ ಮೊದಲೇ ಸ್ನಾನ ಮಾಡಿಕೊಂಡು ಮಡಿಯಿಂದ ಜಂಗಮರಿಗೆ ಸ್ನಾನಕ್ಕೆ ಪೂಜೆಗೆ ಜೋಡಿಸುವರು. ಅಕ್ಷತೆಯನ್ನು ಇಷ್ಟಲಿಂಗಕ್ಕೆ ಧರಿಸುವರೇ ವಿನಾ ತಾವು ಧರಿಸಿಕೊಳ್ಳುವುದಿಲ್ಲ. ಮೊದಲು ಜಂಗಮರ ಇಷ್ಟಲಿಂಗಾರ್ಚನೆ ಮಾಡಿಸುತ್ತೇವೆ ಎಂದರೆ ಅದಕ್ಕೆ ಅರ್ಥವಿದೆ. ಆಗ ಜಂಗಮರ ಇಷ್ಟಲಿಂಗಕ್ಕೆ ಅಕ್ಷತೆ, ಪುಷ್ಪವನ್ನೇರಿಸಿ ಧೂಪ ದೀಪಾರತಿ ಬೆಳಗುವೆವೆಂದು ಅರ್ಥವಾಗುವುದು. 'ಭೂಷಣಗಳನ್ನು ತೊಡುವ ಮುನ್ನವೇ ಜಂಗಮಕ್ಕೆ ಆಭರಣಂಗಳ ತೊಡಿಸುವೆ' ಎಂಬ ಮಾತೂ ಹಾಸ್ಯಾಸ್ಪದವಾದುದು. ಜಂಗಮನೆಂದರೆ ವಿರಕ್ತ; ಅವನು ರುದ್ರಾಕ್ಷಿ, ವಿಭೂತಿ, ಕಾಷಾಯ ವಸ್ತ್ರದ ವಿನ ಬೇರೆ ಆಭರಣಗಳನ್ನು ತೊಡುವುದಿಲ್ಲ. ಜಂಗಮವು ಜಾತಿಯಾಗಿ ವಿಕೃತಗೊಂಡು ಜಂಗಮರು ಗೃಹಸ್ಥರಾದಾಗ ಈ ವಚನವನ್ನು ಬರೆದು ಸೇರಿಸಬೇಕು ಎನ್ನಿಸುತ್ತದೆ.

ನಾನು ವಾಹನಂಗಳ ಏರುವುದಕ್ಕೆ ಮುನ್ನವೆ ಜಂಗಮಕ್ಕೆ ವಾಹನಂಗಳನೇರಿಸುವೆ
ನಾನು ಮನೆಯೊಳಗಿಹುದಕ್ಕೆ ಮುನ್ನವೆ ಜಂಗಮಕ್ಕೆ ಗೃಹವ ಕೊಡುವೆ.

ಈ ಎರಡು ವಾಕ್ಯಗಳು ನನಗೆ ಬಹಳ ಮೆಚ್ಚುಗೆಯಾದವು. ಜಂಗಮನೆಂದರೆ ತ್ಯಾಗಿ, ಯೋಗಿ, ಧರ್ಮಪ್ರಚಾರಕ. ಅವನಿಗೆ ವಾಹನದ ಆವಶ್ಯಕತೆ ಬಹಳ. ಆದ್ದರಿಂದ ಧರ್ಮ ಪ್ರಚಾರಕರಿಗೆ ವಾಹನ ಕೊಡಿಸುವುದು ಆವಶ್ಯಕ ಕರ್ತವ್ಯ. ಅದೇ ರೀತಿ ಜಂಗಮಕ್ಕೆ ಮನೆಯ ಕಟ್ಟಿಸುವುದು ಎಂದರೆ ಉಳಿಯಲು ಮಠವನ್ನು ಕಟ್ಟಿಸುವುದು. ಪ್ರಾರ್ಥನೆಗಾಗಿ ಬಸವ ಮಂಟಪ ಕಟ್ಟಿಸುವುದು ಅಗತ್ಯ. ಕ್ರೈಸ್ತರು, ಮುಸಲೀಮರು, ಸಿಖ್ಖರು ಮೂರು–ನಾಲ್ಕು ಮನೆಗಳಿದ್ದರೂ ಪ್ರಾರ್ಥನೆಗಾಗಿ ಅವರು ಚರ್ಚ್, ಮಸೀದಿ, ಗುರುದ್ವಾರ ಕಟ್ಟಿಸಿ ನಂತರ ತಮ್ಮ ಮನೆ ಕಟ್ಟಿ ಕೊಳ್ಳುವರು. ನಮ್ಮವರು ಬೃಹತ್ ಬಂಗಲೆಗಳನ್ನು ಕಟ್ಟಿಸಿಕೊಳ್ಳುವರು, ಸಮಾಜಕ್ಕೆ ಬಸವ ಮಂಟಪ ಅಗತ್ಯ ಎಂದು ಅರಿಯರು.

ಈ ವಚನದಲ್ಲಿ ಬಳಸಿರುವ ಭಾಷೆ; ಅವನ ಬಾಳುವೆ ಹಂದಿಯ ಬಾಳುವೆ, ಅವನ ಬಾಳುವೆ ನಾಯು ಬಾಳುವೆ. ಅವನ ಬಾಳುವೆ ಕತ್ತೆಯು ಬಾಳುವೆ" ಎಂಬುದು ಅಕ್ಕಮಹಾದೇವಿಯದು ಎನ್ನಿಸುವುದಿಲ್ಲ. (ಮುಂದುವರಿಯುವುದು..)

ಪ್ರವಚನ ಪಿತಾಮಹ

– ಸಚ್ಚಿದಾನಂದ ಚಟ್ನಳ್ಳಿ

ಪೂಜ್ಯ ಲಿಂಗಾನಂದ ಮಹಾಸ್ವಾಮಿಗಳು, ಬಸವ ತತ್ತ್ವವನ್ನು ಇಳೆಯಲ್ಲಿ ಬೆಳಗಲು ಬಂದ ಬಸವ ಭಾನುವಿನ ದಿವ್ಯ ಕಿರಣ ಬಸವ ಧರ್ಮದ ರಾಯಭಾರಿ, ಬಸವ ಯುಗ ನಿರ್ಮಾಪಕರು, ಮಹಾನ್ ತ್ಯಾಗಿಗಳು ತಪಸ್ವಿಗಳು, ಜಂಗಮತ್ವಕ್ಕೆ ಜೀವ ಕೊಟ್ಟ ನಿಜ ಜಂಗಮರು. ಬಸವ ಧರ್ಮದ ವೀರ ಸೇನಾನಿ, ಧರ್ಮಕ್ರಾಂತಿಯ ಧೀರಯೋಗಿ, ಮಹಿಳಾ ಜಗದ್ಗುರು ಪೀಠ ಸಂಸ್ಥಾಪಕರು, ಬಸವ ಧರ್ಮಪೀಠದ ನಿರ್ಮಾತೃಗಳು, ವಿಶ್ವಕಲ್ಯಾಣ ಮಿಷನ್‌ನ ಜನಕರು, ಮಾತೃ ಹೃದಯಿಗಳು, ಶ್ರೇಷ್ಠ ಸಾಹಿತಿಗಳು, ರಾಷ್ಟ್ರೀಯ ಬಸವದಳದ ಸಂಘಟಕರು, ಅಭಿನವ ವಿವೇಕಾನಂದರು, ಎಲ್ಲಕ್ಕೂ ಮಿಗಿಲಾಗಿ ವಿಶ್ವಧರ್ಮ ಪ್ರವಚನಕಾರರು. ಅಷ್ಟೇ ಅಲ್ಲ ವಿಶ್ವಧರ್ಮ ಪ್ರವಚನಕಾರರ ನಿರ್ಮಾಪಕರು.

ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು
ಆಚಾರವೆಂಬ ಬತ್ತಿಗುಂಟ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತ್ತಿರ್ದಿತ್ತಯ್ಯಾ ಶಿವನ ಪ್ರಕಾಶ
ಆ ಬೆಳಗಿನೊಳಗೊಪ್ಪುತ್ತಿರ್ದರಯ್ಯಾ ಅಸಂಖ್ಯಾತ ಶರಣ ಪ್ರಮಥ ಗಣಂಗಳು
ಶಿವಭಕ್ತನಿರ್ದ ಕ್ಷೇತ್ರ ಅವಿಮುಕ್ತಕ್ಷೇತ್ರವೆಂಬುದು ಹುಸಿಯೇ
ಶಿವಭಕ್ತನಿರ್ದ ದೇಶ ಪರಮ ಪಾವನವೆಂಬುದು ಹುಸಿಯೇ
ನಮ್ಮ ಗುಹೇಶ್ವರ ಲಿಂಗದಲ್ಲಿ ಎನ್ನ ಪರಮಾರಾಧ್ಯ ಗುರು
ಸಂಗನ ಬಸವಣ್ಣನ ಕಂಡು ಬದುಕಿದೆನು ಕಾಣಾ ಸಿದ್ಧರಾಮಯ್ಯಾ.

ಅಂದಿನ ಕಾಲದಲ್ಲಿ ಬಸವಣ್ಣನವರು ಎಂಥಾ ಒಂದು ಅದ್ಭುತವಾದ ದೈವೀ ಸಮಾಜವನ್ನು ನಿರ್ಮಾಣ ಮಾಡಿದರು ಎನ್ನುವುದಕ್ಕೆ ಅಲ್ಲಮ ಪ್ರಭುದೇವರ ಈ ವಚನವು ಜೀವಂತ ಸಾಕ್ಷಿಯಾಗಿದೆ.

ಮರ್ತ್ಯಲೋಕದ ಈ ಕರ್ತಾರನ ಕಮ್ಮಟವನ್ನು ಸ್ವಾರ್ಥಿಯಾದ ಮಾನವನು ವರ್ಣ, ಜಾತಿ, ವರ್ಗ, ಅಂತಸ್ತು ಭೇದಗಳಿಂದ ಅಂದಗೆಡಿಸಿದ್ದನ್ನು ಕಂಡು, ಮನನೊಂದು ಕರ್ತನ ಮೇಲಿದ್ದ ಅಪಾರ ಅನನ್ಯವಾದ ಭಕ್ತಿಯಿಂದ, ಸೃಷ್ಟಿಯ ಬಗೆಗಿದ್ದ ಅಭಿಮಾನದಿಂದ, ಮಾನವ ಕುಲದ ಮೇಲಿನ ಉತ್ಕಟವಾದ ಪ್ರೀತಿಯಿಂದ ಬಸವಣ್ಣನವರು ಸುಧಾರಣೆಯನ್ನು ಕೈಗೊಂಡರು. ಮಾನವೀಯ ಮೌಲ್ಯಗಳನ್ನು ಜನಮನದಲ್ಲಿ ಬಿತ್ತಿದರು. ಜಾತಿ ವರ್ಣ ವರ್ಗರಹಿತವಾದ ಕಲ್ಯಾಣ ರಾಜ್ಯವನ್ನು ಕಟ್ಟಿದರು. ಆವರೆಗೂ ಜಗತ್ತು ಕಂಡರಿಯದ ಕೇಳಲರಿಯದ ಸಮಾನತೆಯನ್ನು ಸಮಾಜದಲ್ಲಿ ನೆಲೆಗೊಳಿಸಿದರು. ಧರ್ಮಶ್ರೀಯು ಜನಸಾಮಾನ್ಯರ ಮನ ಮನೆಗಳನ್ನು ಪ್ರವೇಶಿಸುವಂತೆ ವಚನ ವಾಙ್ಮಯವನ್ನು ಕೊಟ್ಟರಲ್ಲದೆ, ಅನುಭವ ಮಂಟವೆಂಬ ಸಂಸ್ಥೆಯ ಮೂಲಕ ಬಯಸಿ ಬಂದವರಿಗೆಲ್ಲ ದೀಕ್ಷಾ ಸಂಸ್ಕಾರ ನೀಡಿದರು. ಶತ ಶತಮಾನಗಳ ಕಾಲದಿಂದಲೂ ಧಾರ್ಮಿಕ ಸಂಸ್ಕಾರದಿಂದ ವಂಚಿತರಾಗಿದ್ದ ಅಸಂಖ್ಯಾತರು ಬಸವ ಧರ್ಮದ ಪಾವನ ಜಲದಲ್ಲಿ ಮಿಂದು ಪಾವನರಾದರು. ಆ ಶಿವನ ಪ್ರಕಾಶದಲ್ಲಿ ನಲಿನಲಿದಾಡಿದರು.

ಆದರೆ ನಂತರ ಆದುದೇನು? ಯಾವಾಗ ಕಲ್ಯಾಣ ಕ್ರಾಂತಿಯಾಯಿತೋ ಆವಾಗ ಕಲ್ಯಾಣವೆಂಬ ಪ್ರಣತೆ ಒಡೆದು ಚೂರು ಚೂರಾಯಿತು. ಭಕ್ತಿ ರಸವೆಂಬ ತೈಲವೂ ಬತ್ತಿ ಹೋಯಿತು. ಬಸವಣ್ಣನೆಂಬ ಜ್ಯೋತಿ ನಂದಿಹೋಯಿತು. ಆಗ ಅಲ್ಲಿ ಶಿವನ ಪ್ರಕಾಶ ಇಲ್ಲವೇ ಇಲ್ಲ. ಬಸವಣ್ಣನೆಂಬ ಕಲ್ಯಾಣದ ಭಾಗ್ಯರವಿ ಅಸ್ತಂಗತವಾದ ಮೇಲೆ ಪುನಃ ಎಲ್ಲೆಲ್ಲಿಯೂ ಕತ್ತಲೆ ಕವಿಯಿತು, ಅಜ್ಞಾನದ ಕತ್ತಲೆ ಮೌಢ್ಯತೆಯ ಕತ್ತಲೆ!

ಯಾವ ಅನಿಷ್ಟ ಆಚರಣೆಗಳನ್ನು ಬಸವಾದಿ ಪ್ರಮಥರು ಗುಡಿಸಿ ಮುಂಬಾಗಿಲಿನಿಂದ ಹೊರ ಹಾಕಿದ್ದರೋ ಆ ಅನಿಷ್ಟ ಆಚರಣೆಗಳನ್ನು ಅಜ್ಞಾನದ ಕತ್ತಲೆಯಲ್ಲಿ ಜನ ಪುನಃ ಅವುಗಳನ್ನು ಹಿಂಬಾಗಿಲಿನಿಂದ ಒಳಗೆ ಸೇರಿಸಿಕೊಂಡು ಲಿಂಗಾಯತ ಧರ್ಮದ ಆಚಾರ ವಿಚಾರಗಳನ್ನು ಕಲಬೆರಕೆ ಮಾಡಿದರು. ಪುನಃ

ಇಲ್ಲಿ ಅಸಮಾನತೆ ಪುರೋಹಿತಶಾಹಿಯ ದಬ್ಬಾಳಿಕೆ ಮಠಾಧಿಕಾರಿಗಳ ವೈಭವ, ಶೋಷಣೆ, ಜಾತೀಯತೆ ಇಂಥ ಒಂದಲ್ಲ ಎರಡಲ್ಲ ಅನೇಕ ಅನಿಷ್ಟಗಳು ಈ ಸಮಾಜಕ್ಕೆ ಮುತ್ತಿಕೊಂಡವು. ಒಂದು ಕಾಲದಲ್ಲಿ ಶರಣ ಸಮಾಜವೇ ಇರಲಿಲ್ಲವೇನೋ ಎನ್ನುವಷ್ಟರ ಮಟ್ಟಿಗೆ ಮೌಢ್ಯತೆಯ ಕತ್ತಲೆ ತುಂಬಿತ್ತು ಈ ಸಮಾಜದಲ್ಲಿ.

ಇಂಥ ಸಂದರ್ಭದಲ್ಲಿ ಪೂಜ್ಯ ಅಪ್ಪಾಜಿಯವರು ಏನು ಮಾಡಿದರು ಎಂದರೆ ಇಡೀ ತಮ್ಮ ಜೀವನವನ್ನು ಬಸವ ತತ್ತ್ವಕ್ಕಾಗಿ ಮುಡುಪಾಗಿಟ್ಟು ತಮ್ಮ ದೇಹವನ್ನೇ ಪ್ರಣತೆಯನ್ನಾಗಿ ಮಾಡಿಕೊಂಡು ತ್ಯಾಗ, ತಪಸ್ಸು ವೈರಾಗ್ಯವೆಂಬ ತೈಲವನ್ನೆರೆದು ತಮ್ಮ ತತ್ತ್ವ ನಿಷ್ಠೆಯೆಂಬ ಬತ್ತಿಯನ್ನಿಟ್ಟು, ಪ್ರವಚನವೆಂಬ ಜ್ಯೋತಿಯನ್ನು ಮುಟ್ಟಿಸಿದರು. ಆಗ ಪುನಃ ತೊಳಗಿ ಬೆಳಗುತ್ತಿರ್ದಿತಯ್ಯಾ ಬಸವ ಪ್ರಕಾಶ. ಈ ಬೆಳಗಿನೊಳಗೆ ಒಪ್ಪುತ್ತಿರ್ದರಯ್ಯ ಅಸಂಖ್ಯಾತ ಬಸವ ಭಕ್ತರು! ಅಪ್ಪಾಜಿಯವರು ಪ್ರವಚನ ಮಾಡಿದ ಊರು ಬಸವ ಮಾಯವಾಗಿದೆ ಎನ್ನುವುದು ಹುಸಿಯೇ! ಅಪ್ಪಾಜಿ ಪ್ರವಚನ ಕೇಳಿದ ಜನರು ಪಾವನರಾದರು ಬಸವ ಭಕ್ತರಾದರು ಎನ್ನುವುದು ಹುಸಿಯೇ! ಬಸವಕಂದ ಪರಮ ಗುರು ಲಿಂಗಾನಂದರ ತ್ಯಾಗದಿಂದ ನಾವೆಲ್ಲ ಬದುಕಿದೆವು.

ಬಸವಣ್ಣನವರ ಕಾಲದಲ್ಲಿ ಜನರು ಸತ್ಯದ ಸಾಧಕರು, ಶೋಧಕರೂ ಆಗಿದ್ದರಿಂದ ಧರ್ಮದ ಕಡೆ ಬಂದರು. ಕಲ್ಯಾಣದಲ್ಲಿ ತೊಳಗಿ ಬೆಳಗುತ್ತಿರ್ದ ಆ ಜ್ಯೋತಿಯಿಂದ ತಮ್ಮ ಬಾಳಿನ ಹಣತೆಯನ್ನು ಹೊತ್ತಿಸಿಕೊಂಡು ಭಕ್ತಿವಂತರಾದರು. ಆದರೆ ಅಪ್ಪಾಜಿಯವರು ಪ್ರವಚನ ಮಾಡುವ ಕಾಲದಲ್ಲಿ ಜನರು ಧರ್ಮದ ಕಡೆ ಬರುವಷ್ಟು ಪ್ರಜ್ಞಾವಂತರಿರಲಿಲ್ಲ. ಅದಕ್ಕಾಗಿ ಧರ್ಮವನ್ನೇ ಅವರ ಕಡೆ ಕೊಂಡೊಯ್ಯುವ ಉದ್ದೇಶದಿಂದ ಪೂಜ್ಯ ಅಪ್ಪಾಜಿಯವರು ಯಾವುದೇ ಮಠವನ್ನು ಒಂದು ಪ್ರಣತೆಯಾಗಿ ಮಾಡದೆ, ತಮ್ಮ ದೇಹವನ್ನೇ ಪ್ರಣತೆಯಾಗಿ ಮಾಡಿಕೊಂಡು ಪ್ರವಚನದ ಬೆಳಕನ್ನು ಹಿಡಿದು ಹೊರಟರು ಆಗ ಮತ್ತೆ ಜನರಲ್ಲಿಯ ಅಜ್ಞಾನದ ಕತ್ತಲೆಯಳಿದು ಸುಜ್ಞಾನದ ಬೆಳಕಿನಲ್ಲಿ ಬಾಳುವಂತಾಯಿತು.

ಇನ್ನೊಂದು ವೈಶಿಷ್ಟ್ಯವೇನೆಂದರೆ ಇಂಥ ಪ್ರವಚನ ಜ್ಯೋತಿಯ ಬಸವ ಪ್ರಕಾಶದಲ್ಲಿಯೇ ಪೂಜ್ಯ ಅಪ್ಪಾಜಿಯವರಿಗೆ ಅಮೂಲ್ಯ ರತ್ನವೊಂದು ಚಿನ್ಮೂಲಾದ್ರಿಯ ಚಿನ್ನದ ಗಣಿಯಲ್ಲಿ ದೊರೆಯಿತು. ಬಸವ ಗುರುವಿನ ಕೀರ್ತಿ ಮುಕುಟದಲ್ಲಿ ಬೆರೆತು, ಬಸವ ತತ್ತ್ವವನ್ನು ವಿಶ್ವದಾದ್ಯಂತ ಬೆಳಗಿದ ಆ ಅಮೂಲ್ಯ ರತ್ನವೇ ಪೂಜ್ಯ ಮಹಾಜಗದ್ಗುರು ಮಾತಾಜಿಯವರು.

ಪೂಜ್ಯ ಅಪ್ಪಾಜಿಯವರ ತ್ಯಾಗವು ಅತ್ಯಂತ ಶ್ರೇಷ್ಠವಾದುದು. ಅವರ ಜೀವನದುದ್ದಕ್ಕೂ ಹೋರಾಟವೇ. ಬದುಕಿನ ಪ್ರಥಮ ಹಂತದಲ್ಲಿ ಬಡತನದೊಡನೆ, ಎರಡನೇ ಹಂತದಲ್ಲಿ ಅನ್ಯಾಯದೊಡನೆ, ಮೂರನೇ ಹಂತದಲ್ಲಿ ಸಂಪ್ರದಾಯದೊಡನೆ ಹೋರಾಟ. ಅದರಲ್ಲಿಯೇ ಅವರ ತಪಸ್ಸು ಸಾಧನೆ ಸಿದ್ಧಿ ಎಲ್ಲವೂ.

ಅವರು ಪ್ರವಚನ ಆರಂಭಿಸಿದಾಗ ಈ ಸಮಾಜದ ಚಿತ್ರಣವನ್ನು ತೆಗೆದುಕೊಂಡರೆ ಅವರ ದಿಟ್ಟತನ ಧೈರ್ಯ ತ್ಯಾಗಗಳ ಅರಿವು ನಮಗಾಗಲು ಸಾಧ್ಯವಿದೆ. ಅಂದು ಬಸವಣ್ಣ ಎಂದರೆ ಎತ್ತಲ್ಲ ಅವರೊಬ್ಬ ಮಹಾಪುರುಷ ಎಂದರೆ ಜನ ಹೊಡೆಯುವಷ್ಟು ಅಜ್ಞಾನಿಗಳಾಗಿದ್ದರು. ಆದರೆ ಇಂದು ಬಸವಣ್ಣ ಎಂದರೆ ಎತ್ತು ಎಂದು ಹೇಳಿದರೆ ಜನ ಹೊಡೆಯುತ್ತಾರೆ. ನಿಜವಾಗಿಯೂ ಯುಗ ಪರಿವರ್ತಕರು ಪೂಜ್ಯ ಸ್ವಾಮೀಜಿಯವರು. ಆ ಕಾಲದಲ್ಲಿ ಈ ಸಮಾಜದಲ್ಲಿ ಸತ್ಯ ಪ್ರತಿಪಾದನೆ ಮಾಡುವುದೆಂದರೆ ಹುಲಿಯ ಮೀಸೆ ಹಿಡಿದು ಉಯ್ಯಾಲೆಯಾಡಿದಂತೆ, ಹಾವಿನ ಹೆಡೆಯ ಕೊಂಡು ಕೆನ್ನೆಯ ತುರಿಸಿ ಕೊಂಡಂತೆ. ಸತ್ಯವನ್ನು ಪ್ರತಿಪಾದನೆ ಮಾಡಲು ಹೊರಟ ಸಾಕ್ರೆಟಿಸನಿಗೆ ವಿಷ ಪ್ರಾಶನ, ಗೆಲಿಲಿಯೋಗೆ ಗಲ್ಲು ಶಿಕ್ಷೆ , ಬಸವಣ್ಣನವರಿಗೆ ಗಡಿಪಾರು ಶಿಕ್ಷೆ, ಗಾಂಧೀಜಿಯವರಿಗೆ ಗುಂಡಿನೇಟು! ಇದನ್ನೆಲ್ಲಾ ಅರಿತೂ ಕೂಡ ಅದ್ಭುತ ಕಾರ್ಯಕ್ಕೆ ಕೈಹಾಕಿದ ಧೀಮಂತ ಗುರು ಪೂಜ್ಯ ಲಿಂಗಾನಂದ ಸ್ವಾಮೀಜಿಯವರು.

ಪುರಾಣಗಳಲ್ಲಿ ನಾವೊಂದು ಕಥೆಯನ್ನು ಕೇಳುತ್ತೇವೆ, ಸಮುದ್ರ ಮಂಥನ ಮಾಡುವ ಕಾಲದಲ್ಲಿ ಕೆಲವೊಂದು ಏನೇನೋ ಅಮೂಲ್ಯ ವಸ್ತುಗಳು ಬಂದವು. ಅವುಗಳನ್ನು ನಾ ಮುಂದೆ ತಾ ಮುಂದೆ ಎಂದು ಅನೇಕರು ತೆಗೆದುಕೊಂಡರಂತೆ. ಆಮೇಲೆ ಹಾಲಾಹಲ ಎನ್ನುವ ವಿಷವೂ ಕೂಡ ಹೊರ ಬಂತು.

ಅದನ್ನು ಯಾರೂ ತೆಗೆದುಕೊಳ್ಳಲಾಗಲಿಲ್ಲ ಹಾಗೆ ಬಿಟ್ಟರೆ ಈ ಜಗತ್ತೂ ಕೂಡ ಉಳಿಯುತ್ತಿರಲಿಲ್ಲವಂತೆ. ಆಗ ಕರುಣಾಮಯಿಯಾದ ಶಿವನು ಬಂದು ಆ ವಿಷವನ್ನು ಕುಡಿದು ಜಗತ್ತನ್ನು ಕಾಪಾಡಿದ. ವಿಷ ಕುಡಿದುದರಿಂದ ಅವನ ಕಂಠವು ನೀಲಿ ಬಣ್ಣವಾಯಿತು. ಅದಕ್ಕಾಗಿ ಅಂದಿನಿಂದ ಅವನಿಗೆ ನೀಲಕಂಠ ಎಂಬ ಹೆಸರೂ ಬಂದಿದೆಯಂತೆ. ಆದರೆ ಇಷ್ಟಂತೂ ನಿಜ ಯಾವ ಸಮಾಜದ ಜನರ ಮನಗಳೆಂಬ ಹರವಿಯಲ್ಲಿ ಶತ ಶತಮಾನಗಳ ಕಾಲದಿಂದಲೂ ಸಂಪ್ರದಾಯದ, ಮೌಢ್ಯತೆಯ ಅಜ್ಞಾನದ ಜಿಡ್ಡು ಹೊಲಸು ತುಂಬಿತ್ತೊ, ಅದನ್ನು ಬಸವ ತತ್ತ್ವವೆಂಬ ಕೊಳೆನಾಶಕದಿಂದ ತೊಳೆದು ಅಲ್ಲಿ ಬಸವ ಭಕ್ತಿಯೆಂಬ ಕೆನೆ, ಮೊಸರನ್ನು ಹಾಕಿ ಪ್ರವಚನವೆಂಬ ಕಡೆಗೋಲಿನಿಂದ ಸದಾಚಾರ, ಶಿವಾಚಾರವೆಂಬ ಹಗ್ಗದಿಂದ ಅನುಭಾವ ಮಂಥನ ಮಾಡಿ ಬಸವ ತತ್ತ್ವದ ನವನೀತವನ್ನು ಕೊಡುವಾಗ ಅನೇಕ ಸಂಪ್ರದಾಯವಾದಿಗಳು, ಮತಾಂಧರು, ದುಷ್ಟರು ನೀಡಿದ ಅನಂತ ಕಷ್ಟಕಾರ್ಪಣ್ಯ, ಕಿರುಕುಳ, ಅಡ್ಡಿ ಆತಂಕವೆಂಬ ವಿಷವನ್ನು ಕುಡಿದು ಜನ ಬದುಕಬೇಕು, ಜಗ ಬದುಕಬೇಕು ಎಂದು ವಚನ ನವನೀತವನ್ನಿತ್ತು, ಬಸವ ತತ್ತ್ವಾಮೃತವನ್ನಿತ್ತು ನಮ್ಮನೆಲ್ಲ ರಕ್ಷಿಸಿದ ನಿಜವಾದ ನೀಲಕಂಠ ಮಹಾಗುರು ಅಪ್ಪಾಜಿಯವರು.

ಪೂಜ್ಯ ಸ್ವಾಮೀಜಿಯವರು ಪ್ರವಚನ ಪಿತಾಮಹರು, ಬಿಜಾಪುರ ಜಿಲ್ಲೆಯು ಕೇವಲ ಸ್ಥಾವರವಾದ ಒಂದು ಗೋಲಗುಮ್ಮಟವನ್ನು ಕಾಣಿಕೆಯಾಗಿ ಕೊಡದೇ ಜಂಗಮವಾಗಿರುವ ಇನ್ನೂ ಮೂರು ಅಮೂಲ್ಯ ಗುಮ್ಮಟಗಳನ್ನೂ ಜಗತ್ತಿಗೆ ನೀಡಿದೆ. 1. ಧರ್ಮಗುಮ್ಮಟ ಗುರುಬಸವಣ್ಣನವರು. 2. ವಚನ ಗುಮ್ಮಟ ಫ.ಗು. ಹಳಕಟ್ಟಿಯವರು. 3. ಪ್ರವಚನ ಗುಮ್ಮಟ ಪೂಜ್ಯ ಲಿಂಗಾನಂದ ಸ್ವಾಮಿಗಳು. ಗೋಲಗುಮ್ಮಟದಲ್ಲಿ ಒಮ್ಮೆ ಧ್ವನಿಸಿದ ಧ್ವನಿ ಏಳುಬಾರಿ ಪ್ರತಿಧ್ವನಿಸುತ್ತದೆ. ಆದರೆ ಪ್ರವಚನ ಗುಮ್ಮಟದಲ್ಲಿ ಒಮ್ಮೆ ಧ್ವನಿಸಿದ 'ಬಸವ' ಎಂಬ ಧ್ವನಿ, ಲಕ್ಷ ಲಕ್ಷ ಬಸವ ಭಕ್ತರ ಹೃದಯದಲ್ಲಿ ಪ್ರತಿಧ್ವನಿಸಿದೆ. ಪ್ರವಚನ ಎನ್ನುವ ಒಂದು ಹೊಸ ಶೈಲಿಯನ್ನು ಹುಟ್ಟು ಹಾಕಿದವರೇ ಸ್ವಾಮೀಜಿಯವರು. ಅಲ್ಲಿಯವರಿಗೆ ಕೇವಲ ಪುರಾಣ ಕೀರ್ತನೆಗಳು ಮಾತ್ರ ನಡೆಯುತ್ತಿದ್ದವು, ವಚನ ಸಾಹಿತ್ಯದ ಮೇಲೆ ಅದು ತಿಂಗಳುಗಟ್ಟಲೆ ಪ್ರವಚನ ಮಾಡುವುದನ್ನು ರೂಢಿಸಿದ್ದಾರೆ. ಇನ್ನೊಂದು ರೀತಿಯಿಂದ ಹೇಳಬೇಕೆಂದರೆ, ಧರ್ಮಪಿತರು ಅಂದು ಅನುಭವ ಮಂಟಪ ಎಂಬ ಕಣದಲ್ಲಿ ರಾಶಿ ಮಾಡಿಕೊಟ್ಟ ವಚನ ಸಾಹಿತ್ಯ ಕಲ್ಯಾಣ ಕ್ರಾಂತಿಯ ನಂತರ ಇತಿಹಾಸವೆಂಬ ಹಗೇವದಲ್ಲಿ ಇಡಲ್ಪಟ್ಟಿತ್ತು. ಇಂತಹ ಸಂದರ್ಭದಲ್ಲಿ ಬಹಳ ಕಷ್ಟಪಟ್ಟು ಪರಿಶ್ರಮದಿಂದ ಶರಣ ಫ.ಗು.ಹಳಕಟ್ಟಿಯವರು ಮನೆ ಮನೆಗೆ ಹೋಗಿ ವಚನ ಸಾಹಿತ್ಯದ ತಾಡ ಓಲೆಗಳನ್ನು ಸಂಗ್ರಹಿಸಿದರು. ಅವುಗಳ ಪ್ರಕಟಣೆಗಾಗಿ ತಮ್ಮ ಮನೆಯನ್ನೇ ಮಾರಿ ಪ್ರಿಂಟಿಂಗ್ ಪ್ರೆಸ್ ಹಾಕಿ ವಚನಗಳನ್ನು ಪುಸ್ತಕದ ರೂಪದಲ್ಲಿ ಪ್ರಕಟಿಸಿದ ತ್ಯಾಗಿ ವಚನ ಪಿತಾಮಹ ಫ.ಗು. ಹಳಕಟ್ಟಿಯವರು.

ಇಂಥ ಪ್ರಕಟಣೆಗೊಂಡ ವಚನ ಸಾಹಿತ್ಯ ಕೇವಲ ಪುಸ್ತಕಗಳಲ್ಲಿ ಉಳಿದರೆ ಸಾಲದು ಅದು ಜನ ಮನಗಳ ಬಾಗಿಲಿಗೆ ಮುಟ್ಟಬೇಕು ಎಂದು ತಿಳಿದು ಪ್ರವಚನವೆಂಬ ಕೂರಗಿಯ ಮುಖಾಂತರ ಕರ್ನಾಟಕದಾದ್ಯಂತ ಅಷ್ಟೇ ಅಲ್ಲದೆ ಹೊರ ರಾಜ್ಯಗಳಲ್ಲಿಯೂ ಬಿತ್ತಿ ಬಸವ ತತ್ತ್ವದ ಅಮೋಘ ಬೆಳೆಯನ್ನು ತೆಗೆದ ಆಧ್ಯಾತ್ಮ ಕೃಷಿಕ ಪೂಜ್ಯ ಸ್ವಾಮೀಜಿಯವರು.

ಬಸವಾದಿ ಪ್ರಮಥರ ವಚನ ನಂದನ ವನದೊಳಗೆ ವಿಹರಿಸಿ ವಚನವಾಙ್ಮಯ ರಸವನ್ನೀಂಟಿ ಬಸವ ಭಕ್ತಿಯ ಕೂಹೂ ಕೂಹೂ ರಾಗ ಹಾಡಿ ಅಸಂಖ್ಯಾತರ ಹೃನ್ಮನಗಳನ್ನು ತಣಿಸಿದ ದೇವ ಕೋಗಿಲೆಯಾದರು.

ಅವರ ಕಂಚಿನ ಕಂಠದಿಂದ ಕನ್ನಡ ಸಾಹಿತ್ಯದ ಕಿರೀಟವಾದ ವಚನ ಸಾಹಿತ್ಯದ ನುಡಿಗಳು ಹೊರ ಹೊಮ್ಮುತ್ತಿದ್ದರೆ ಅಲ್ಲಿ ಕನ್ನಡ ಸರಸ್ವತಿ ನಾಟ್ಯವಾಡಿದಂತೆ ಭಾಸವಾಗುತ್ತದೆ. ಆ ಕಂಠವೇ ಒಂದು ಅದ್ಭುತ ಸಿಂಹಗರ್ಜನೆ ಇದ್ದ ಹಾಗೆ. ಎಂಥವರನ್ನೂ ಮಂತ್ರ ಮುಗ್ಧವಾಗಿಸುವ ಆ ಕಂಠವನ್ನು ಕ್ಯಾಸೆಟ್‌ಗಳಲ್ಲಿ ಸೆರೆ ಹಿಡಿದು ಬಹು ದೊಡ್ಡ ಉಪಕಾರವನ್ನು ಪೂಜ್ಯ ಮಾತಾಜಿಯವರು ಮಾಡಿದ್ದಾರೆ.

ತತ್ತ್ವ ಪ್ರಸಾರಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟು ಶ್ರೀಗಂಧದಂಥ ತ್ಯಾಗ ಮಾಡಿದ್ದಾರೆ. ಶ್ರೀಗಂಧದ ಮರವು ತನ್ನ ಆಶ್ರಯದಲ್ಲಿ ಇರುವ ಮರಗಳಿಗೂ ಕೂಡ ಸುವಾಸನೆ ಬರುವಂತೆ ಮಾಡುತ್ತದೆ. ಕಡಿದು ತೇಯ್ದರೆ ಗಂಧವನ್ನು ನೀಡುತ್ತದೆ, ಸುಟ್ಟರೆ ಸುವಾಸನೆಯನ್ನು ಬೀರುತ್ತದೆ, ಕೆತ್ತಿದರೆ ಮೂರ್ತಿಯಾಗುತ್ತದೆ.

ಅದೇ ರೀತಿ ಸ್ವಾಮೀಜಿಯವರು ತಮ್ಮ ಆಶ್ರಯಕ್ಕೆ ಬಂದ ಪ್ರತಿಯೊಬ್ಬರಲ್ಲಿಯೂ ಬಸವ ಭಕ್ತಿಯ, ತತ್ತ್ವ ನಿಷ್ಠೆಯ ಪರಿಮಳವನ್ನು ತುಂಬಿದ್ದಾರೆ. ಧರ್ಮ ಪ್ರಸಾರಕ್ಕಾಗಿ ತಮ್ಮನ್ನು ತಾವು ಸವೆಸಿಕೊಂಡಿದ್ದಾರೆ. ಅನೇಕ ಕಷ್ಟಗಳ ಅಗ್ನಿಯಲ್ಲಿ ಬೆಂದು ಬಸವ ತತ್ತ್ವದ ಸುವಾಸನೆಯನ್ನು ಎಲ್ಲೆಲ್ಲಿಯೂ ಬೀರಿದ್ದಾರೆ. ಕೊನೆಗೆ ಬಸವ ಮಹಾಗುರುವೆಂಬ ಶಿಲ್ಪಿಯ ಕೈಗೆ ಸಿಕ್ಕಿ ಆದರ್ಶ ಮೂರ್ತಿಯಾಗಿದ್ದಾರೆ. ಎಂತಹದೇ ಸಂದರ್ಭದಲ್ಲಿ ಎದೆಗುಂದಲಿಲ್ಲ ಸತ್ಯವನ್ನು ಹೇಳಲು ಯಾರಿಗೂ ಹೆದರಲಿಲ್ಲ.

ಜಂಗಮತ್ವಕ್ಕೆ ಜೀವ ತಂದು ಕೊಟ್ಟು ಕಾವಿಬಟ್ಟೆಗೆ ಕೀರ್ತಿಯನ್ನು ತಂದಿದ್ದಾರೆ. ಪೂಜ್ಯರ ಸಾಹಿತ್ಯ ರಚನೆಯೂ ಕೂಡ ಅಷ್ಟೇ ಅದ್ಭುತವಾಗಿದೆ. ಇಂದು ಸುಯಿಧಾನ ಸುಗ್ರಂಥ ಮಾಲೆಯು ಸುಮಾರು 146 ಗ್ರಂಥ ಪುಷ್ಪಗಳನ್ನು ಅರಳಿಸಿದೆ. ಇದು ಸ್ವಾಮೀಜಿಯವರು ನೆಟ್ಟ ಬಳ್ಳಿ. ಇವರು ಬರೆದಿರುವ ಒಂದೊಂದು ಕೃತಿಯೂ ಕೂಡ ಉದ್ದಾಮ ಕೃತಿಯೇ. 'ದೇವರು' ಎನ್ನುವಂಥ ಕೃತಿ ಬಹುಶಃ ಜಗತ್ತಿನ ಇನ್ನಾವುದೇ ಭಾಷೆಯಲ್ಲಿರಲಿಕ್ಕಿಲ್ಲ. ದೇವರ ಸ್ವಯಂಭು ಕಲ್ಪನೆಯನ್ನು ದೇವರ ಸ್ವರೂಪವನ್ನು ಅದರಲ್ಲಿ ಬಿಡಿ ಬಿಡಿಯಾಗಿ ಚಿತ್ರಿಸಿದ್ದಾರೆ.

ಬಸವಣ್ಣನವರ ವಚನ ವಾರಿಧಿಯಲ್ಲಿ ಮಿಂದ ಪೂಜ್ಯ ಅಪ್ಪಾಜಿಯವರ ಶರೀರದಲ್ಲಿ ಬಸವಣ್ಣನವರ ಕಾರಣ ಶರೀರ ವಾಸವಾಗಿದ್ದು ಇಂಥ ಅದ್ಭುತ ಕಾರ್ಯಗಳನ್ನು ಮಾಡಿಸಿದೆಯೇನೊ ಎನಿಸುತ್ತದೆ. ತಮ್ಮ ನುಡಿಯೇ ಬಸವಣ್ಣನ ನುಡಿಯಾಗಿ, ಬಸವಣ್ಣನವರ ನುಡಿಗೆ ತಾವು ತುಟಿಯಾಗಿ, ಬಸವಣ್ಣನವರ ನೋಟಕ್ಕೆ ತಾವು ಕಣ್ಣಾಗಿ, ಬಸವಣ್ಣನವರ ಕಾರ್ಯಕ್ಕೆ ತಾವು ಕಾರಣಕರ್ತರಾಗಿದ್ದರು.

ಈ ಮಾತಿಗೆ ಪ್ರತ್ಯಕ್ಷ ಸಾಕ್ಷಿ ಎಂದರೆ, ಧಾರವಾಡದಲ್ಲಿ ಸ್ಥಾಪಿಸಲ್ಪಟ್ಟ ಜಗನ್ಮಾತ ಅಕ್ಕಮಹಾದೇವಿ ಅನುಭಾವ ಪೀಠ. ಈ ಪೀಠ ಸ್ಥಾಪನೆಯು ಎಲ್ಲವೂ ಆಕಸ್ಮಿಕವಾಗಿಯೇ ನಡೆದು ಹೋಯಿತು.

ಅಂದು ಗುರುಬಸವಣ್ಣನವರ ಅನೇಕ ಹೃದ್ಗತ ಕನಸುಗಳು ಸಂಕಲ್ಪಗಳು ಅನೀರಿಕ್ಷಿತ ಕಲ್ಯಾಣ ಕ್ರಾಂತಿಯಿಂದ ನನಸಾಗದೇ ಈಡೇರದೆ ಹೋದವು ಅವುಗಳಲ್ಲಿ ಅಕ್ಕಮಹಾದೇವಿ ಅನುಭಾವ ಪೀಠವು ಒಂದು ಎಂದರೆ ತಪ್ಪಾಗಲಾರದು.

ಸ್ತ್ರೀ ಸಮಾನತೆಯನ್ನು ಸಾರಿದ್ದ ಬಸವಣ್ಣನವರು, ಅಂದು ಪುರುಷರಿಗೆ ಅನುಭಾವ ಮಂಟದಲ್ಲಿ ಶೂನ್ಯಪೀಠವನ್ನು ಮಾಡಿ, ಪ್ರಥಮ ಅಧಿಕಾರಿಯಾಗಿ ಅಲ್ಲಮ ಪ್ರಭುದೇವರನ್ನು ಮಾಡಿದರು. ಬಹುಶಃ ಬಸವಣ್ಣನವರು ಅಂದು ಮಹಿಳಾ ಪೀಠವೊಂದನ್ನು ಮಾಡುವ ಸಂಕಲ್ಪ ಹೊಂದಿರಬೇಕು ಅಥವಾ ಅದೇ ಪೀಠಕ್ಕೆ ಎರಡನೇ ಅಧಿಕಾರಿಣಿಯಾಗಿ ಅಕ್ಕಮಹಾದೇವಿ ತಾಯಿಯವರನ್ನು ನೇಮಿಸುವ ಸಂಕಲ್ಪವಾದರೂ ಹೊಂದಿರಲೇಬೇಕು. ಆದರೆ ಬಹಳ ಬೇಗ ಅಕ್ಕ ಕಲ್ಯಾಣದಿಂದ ಕದಳಿ ವನಕ್ಕೆ ನಿರ್ಗಮಿಸಿದರಿಂದ ಆ ಸಂಕಲ್ಪ ನೆರವೇರಲಿಲ್ಲ.

ಹೀಗೆ ಆಕಸ್ಮಿಕವಾಗಿ ಪೂಜ್ಯ ಮಾತಾಜಿಯವರು ಬಸವ ಕಲ್ಯಾಣದಲ್ಲಿ ಭಾಷಣ ಮಾಡುವಾಗ ಬಸವಣ್ಣನವರ ಸಂಕಲ್ಪವನ್ನು ಗ್ರಹಿಸಿದ ಅವರ ಹೃದಯ, ಮಹಿಳಾ ಗುರು ಪೀಠವೊಂದರ ಅವಶ್ಯಕತೆ ಇದೆ ಎಂದು ನುಡಿಸಿತು. ಆಗಲೇ ಕೆಲವರು ಸಾಧ್ಯವಿಲ್ಲ ಹೆಣ್ಣು ಮಕ್ಕಳು ಹೇಗೆ ಗುರುವಾಗಲಿಕ್ಕೆ ಬರುತ್ತದೆ ಎಂದು ವಿರೋಧಿಸಿದ್ದಾಗ ಹೇಗೆ ಸಾಧ್ಯವಿಲ್ಲ ಮಾಡಿ ತೋರಿಸುತ್ತೇನೆ ಎಂದು ಪೂಜ್ಯ ಸ್ವಾಮೀಜಿಯವರು ಪ್ರತಿಜ್ಞೆಯ ನುಡಿಗಳಾಡಿದರಂತೆ. ಇದಾದ ಕೇವಲ ಒಂದುವರೆ ವರ್ಷದಲ್ಲಿಯೇ ಪೀಠಸ್ಥಾಪನೆ ಆಗಿಯೇ ಬಿಟ್ಟಿತು.

ಪೂಜ್ಯ ಅಪ್ಪಾಜಿಯವರ ನಿಷ್ಕಲ್ಮಷವಾದ ಮತ್ಸರ ರಹಿತವಾದ ಹೃದಯವು ಹಾಲಿನಷ್ಟು ಶುಭ್ರ. ಬಹುಶಃ ಯಾವ ಗುರುವು ಕೂಡ ತಮ್ಮ ಶಿಷ್ಯರ ಬಗ್ಗೆ 'ಚಿನ್ಮೂಲಾದ್ರಿಯ ಚಿತ್ಕಳೆ'ಯಂಥ ಗ್ರಂಥ ಬರೆದಿರಲಿಕ್ಕಿಲ್ಲ. ಜಗನ್ಮಾತಾ ಅಕ್ಕಮಹಾದೇವಿ ಪೀಠದ ದ್ವಾದಶ ಪೀಠಾರೋಹಣ ಸಂದರ್ಭದಲ್ಲಿ ಮಾತಾಜಿಯವರ ಬಗ್ಗೆ ಹೀಗೆ ಹೇಳಿದ್ದಾರೆ:

"ಗುರುವೆಂಬ ಶಿಲ್ಪಿಯಾಗಿ ನಾನೊಂದು ಕನಸು ಕಟ್ಟಿದೆ ಪ್ರತಿಭಾವಂತ ಧರ್ಮ ಪ್ರಚಾರಕರನ್ನು ಬಸವ ತಂದೆಗಾಗಿ ಬಾಳನ್ನು ಮುಡುಪಿಡುವ ತ್ಯಾಗಿಗಳನ್ನು ಬಸವಣ್ಣನವರ ಕನಸನ್ನು ನನಸು ಮಾಡಬಲ್ಲ ತತ್ತ್ವ ನಿಷ್ಠರನ್ನು ರೂಪಿಸಬೇಕೆಂಬ ಆಕಾಂಕ್ಷೆ ತಳೆದಿದ್ದೆ. ಮಾತಾಜಿಯೆಂಬ ದೇವ ಶಿಲೆ ಕಂಡಾಗ ಈ ಆಶೋತ್ತರಗಳು ಸಿದ್ಧಿಸಬಹುದೇನೊ ಎಂದು ಸಂಕಲ್ಪಿಸಿದೆ. ಮೂರ್ತಿ ನನ್ನ ಕಲ್ಪನೆಗೆ ತಕ್ಕಂತೆ ಸಿದ್ಧವಾಯಿತು. ಕಲ್ಪನೆಗೂ ಅತೀತವಾಗಿ ರೂಪುದಾಳಿತು. ಶಿಲ್ಪಿಯು ಅನೇಕ ವಿಗ್ರಹಗಳನ್ನು ಕೆತ್ತಿದರೂ ಕೆಲವು ಮಾತ್ರ ಅವನನ್ನು ಕೀರ್ತಿವಂತನನ್ನಾಗಿಸುತ್ತವೆ. ಅಂತಾಯಿತು ಮಾತಾಜಿಯವರ ಸಾಧನೆ".

ಅಂದು ಪೂಜ್ಯರು ವಿಶ್ವ ಕಲ್ಯಾಣ ಮಿಷನ್ ಎನ್ನುವ ಸಸಿಯನ್ನು ನೆಟ್ಟಿದ್ದರು. ಅದು ಇಂದು ಹೆಮ್ಮರವಾಗಿ ಬೆಳೆದು ಅನೇಕ ಸಾಧಕರಿಗೆ ಬಡವರಿಗೆ ಆಶ್ರಯ ಕೊಟ್ಟಿದೆ. ಬಸವ ಧರ್ಮ ಪೀಠದಲ್ಲಿ ದಿನನಿತ್ಯ ದಾಸೋಹ ನಡೆಯುತ್ತದೆ. ಇದೆಲ್ಲವೂ ಕೂಡ ಬಸವಣ್ಣನವರ ಸಂಕಲ್ಪವೇ ಆಗಿತ್ತೇನೋ ಎನಿಸುತ್ತದೆ.

ಪರಿಪೂರ್ಣವಾಗಿ ಧರ್ಮ ಪ್ರಚಾರ ಯಾವ ಯಾವ ಮಾಧ್ಯಮಗಳಿಂದ ಸಾಧ್ಯವೋ ಆ ಎಲ್ಲಾ ಮಾಧ್ಯಮಗಳನ್ನು ಬಳಸಿಕೊಂಡು ಧರ್ಮ ಪ್ರಚಾರ ಗೈದಿದ್ದಾರೆ. ಪ್ರವಚನಕ್ಕೆ ಜನ ಕರೆದಾಗ ಮಾತ್ರ ಹೋಗದೆ, ತಾವೆ ಸ್ವತಃ ಊರೂರಿಗೆ ಹೋಗಿ ಪ್ರವಚನ ಮಾಡುವುದರ ಮುಖಾಂತರ, ಸಾಹಿತ್ಯ ರಚನೆಯ ಮುಖಾಂತರ, ಧ್ವನಿಸುರುಳಿಗಳನ್ನು ರೆಕಾರ್ಡ್ ಮಾಡುವುದರ ಮುಖಾಂತರ ಎಲ್ಲಕ್ಕೂ ಮಿಗಿಲಾಗಿ ಏನೂ ಅರಿಯದ ಮುಗ್ಧರು ಕೂಡ ಬಸವಣ್ಣನವರ ವ್ಯಕ್ತಿತ್ವವನ್ನು ಅರಿಯಲು, ಅನೇಕ ಕಷ್ಟಗಳನ್ನು ಸಹಿಸಿ 'ಕ್ರಾಂತಿಯೋಗಿ ಬಸವಣ್ಣ' ಎಂಬ ಚಲನಚಿತ್ರ ಕೂಡ ವಿಶ್ವ ಕಲ್ಯಾಣ ಮಿಷನ್ ಸಂಸ್ಥೆಯಿಂದ ನಿರ್ಮಿಸಿದ್ದಾರೆ.

ಪೂಜ್ಯ ಅಪ್ಪಾಜಿಯವರು ಜನಮನಗಳಲ್ಲಿ ವಚನ ಸಾಹಿತ್ಯದ ಬೀಜಗಳನ್ನು ನೆಟ್ಟು ಪ್ರವಚನವೆಂಬ ಅಮೋಘ ವರ್ಷಧಾರೆಗೈದು ಬಸವ ತತ್ತ್ವದ ಬೆಳೆಯನ್ನು ಬೆಳೆಸಿದ್ದಾರೆ. ಆದರೆ ಇಂದು ಅಂಥ ಮಳೆ ಇನ್ನು ಸಾಧ್ಯವಿಲ್ಲವಲ್ಲ ಎಂದು ದುಃಖವಾಗುತ್ತದೆ. ಆದರೂ ಚಿಂತೆಯಿಲ್ಲ ಪೂಜ್ಯ ಮಾತಾಜಿ ಎನ್ನುವಂತ ದೊಡ್ಡ Reservoir ಬಸವ ತತ್ತ್ವದ ಜಲಾಶಯವನ್ನೇ ನಿರ್ಮಿಸಿದ್ದಾರೆ. ಈ ಜಲಾಶಯ ಅಂದಿನಿಂದ ಇಂದಿನವರೆಗೂ ಬಸವ ಭಕ್ತರ ಹೃನ್ಮನಗಳನ್ನು ತಣಿಸುತ್ತಲೇ ಇದೆ. ಮತ್ತೆ ಅವರು ಸೃಷ್ಟಿಸಿದ ಅದ್ಭುತವಾದ ಸಾಹಿತ್ಯದಿಂದ ಎಂದೆಂದಿಗೂ ಬಸವ ತತ್ತ್ವ ಹಚ್ಚಹಸುರಾಗಿರುವಂತೆ ಮಾಡಿದ್ದಾರೆ. ಅದಕ್ಕಾಗಿ ನಾವೂ ಪೂಜ್ಯದ್ವಯರಿಗೆ ಎಷ್ಟೇ ಕೃತಜ್ಞತೆ ಸಲ್ಲಿಸಿದರೂ ಕಡಿಮೆಯೇ ಪೂಜ್ಯ ಗುರೂಜಿಯವರ ಇಂಥ ದಿವ್ಯವಾದ ಬದುಕನ್ನು ನೋಡಿದಾಗ.

ಲೋಕದಂತೆ ಬಾರರು, ಲೋಕದಂತೆ ಇರರು
ಲೋಕದಂತೆ ಹೋಗರು ನೋಡಾ, ಪುಣ್ಯದಂತೆ ಬಪ್ಪರು
ಜ್ಞಾನವಂತೆ ಇಪ್ಪರು ಮುಕ್ತಿಯಂತೆ ಹೋಹರು ನೋಡಯ್ಯ
ಉರಿಲಿಂಗದೇವಾ ನಿಮ್ಮ ಶರಣರು ಉಪಮಾತೀತರಾಗಿ ಉಪಮಿಸಬಾರದು

ಎನ್ನುವ ಉರಿಲಿಂಗದೇವ ಶರಣರ ವಚನದಂತೆ ತಾವು ಈ ಜಗತ್ತನ್ನು ಬಿಡುವ ಮೊದಲೇ ಎಂದೆಂದೂ ಅಳಿಯದಂಥ ತಮ್ಮ ಹೆಜ್ಜೆಗಳನ್ನು ಇಲ್ಲಿ ಬಿಟ್ಟು ಹೋಗಿದ್ದಾರೆ. ಆ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ನಾವೆಲ್ಲರೂ ಏಕ ಮನಸ್ಸಿನಿಂದ ನಡೆವದ್ದೇ ಆದರೆ ಅವರ ಆ 40 ವರ್ಷಗಳ ವಾಙ್ಮಯ ತಪಸ್ಸು ಸಾರ್ಥಕವಾದಂತಾಗುತ್ತದೆ ಎಂದು ತಿಳಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

"ಘನಶರಣ ಅಂಬಿಗರ ಚೌಡಯ್ಯ" ಭಾಗ-2

– ಶಾರದಾ ಬಸವರಾಜು

ಶರಣರಾಗಿ ಪರಿವರ್ತನೆಗೊಂಡ ಅಂಬಿಗರ ಚೌಡಯ್ಯನವರು ಗುರುಬಸವಣ್ಣನವರ ಬಗ್ಗೆ ಅಪಾರ ಅಭಿಮಾನ ಉಕ್ಕಿ ಹೇಳುತ್ತಾರೆ, "ಬಸವಣ್ಣ ಮಾಡುವ ಭಕ್ತಿ ಶಿಶುವೆಲ್ಲಾ ಕರಸ್ಥಲದಾಲಯಕ್ಕೆ ಬಂದ ಪರಿಯ ನೋಡಿರಯ್ಯ. ಇಂದು ಅಪ್ರಮಾಣ ಅಗೋಚರ ಅಪ್ರತಿಮ ಇಷ್ಟಲಿಂಗವ ಬಿಟ್ಟು ಇನ್ನಾವದೇವತೆಗಳನ್ನು ಕಣ್ಣೆತ್ತಿಯೂ ನೋಡಲಾರೆ, ಪೂಜಿಸಲಾರೆ, ಇದು ಸತ್ಯ ಎಂದು ನುಡಿದರು. ಈರೇಳು ಭುವನವನೊಳಗೊಂಡ ಎನ್ನ ದೇವನೆಲ್ಲಿ? ಸ್ಥಿರವಲ್ಲದ ನೆಲೆಯಿಲ್ಲದ ನಿಮ್ಮ ದೇವನೆಲ್ಲಿ? ಎನ್ನ ದೇವಂಗೆ ಅಸುರರ ಮಾಲೆಗಳಿಲ್ಲ, ಬ್ರಹ್ಮ ಕಪಾಲವಿಲ್ಲ, ವೃಷಭನ ವಾಹನವಲ್ಲ, ಎಮ್ಮ ದೇವ ನಿರಾಕಾರ, ನಿರ್ಗುಣ, ಬಯಲು ಸ್ವರೂಪ ವಿಶ್ವದ ಪ್ರತಿರೂಪ, ಇದು ಎನಗೆ ಗುರು ಬಸವಣ್ಣನವರು ಅನುಗ್ರಹಿಸಿದ ಪರಾತ್ಪರ ವಸ್ತು. ಇದನ್ನು ಪಡೆಯಬೇಕೆಂದರೂ ಬಹಳ ಪುಣ್ಯ ಮಾಡಿರಬೇಕು." ಎಂದರು ಚೌಡಯ್ಯನವರ ಮಾತಿಗೆ ಮರುಳಾಗಿ ಕುಳಿತಿದ್ದ ಇನ್ನೊಬ್ಬ ಯುವಕ ನಿನ್ನ ಜಾತಿ ಈಗ ಏನಾಯಿತು? ಎಂದು ಕೇಳಿದರು.

ಅದಕ್ಕೆ ಅಲ್ಲಮ ಪ್ರಭುಗಳು ಹೌದು ಬಸವಣ್ಣನವರು ಎನಗೆಯೂ ಗುರು ನಿನಗೆಯೂ ಗುರು ಜಗವೆಲ್ಲಕೂ ಗುರು ಎಂದು ನುಡಿದಾಗ ಗುರು ಬಸವಣ್ಣನವರನ್ನು ಮೀರಿಸುವವರೂ ಯಾರೂ ಇಲ್ಲ. ನಾವು ಯಾರನ್ನೋ ಗುರು, ಯಾವುದನ್ನೋ ದೇವರು, ಕೇವಲ ಜಂಗಮ ವಸ್ತ್ರ ಲಾಂಛನ ಧಾರಿಯನ್ನೇ ಜಂಗಮವೆಂದು ತಿಳಿದು ಅವರಡಿಗೆ ಎರಗುತ್ತಿದ್ದ ನಮ್ಮನ್ನು ಬಡಿದೆಬ್ಬಿಸಿ ಪಾರು ಮಾಡಿದ ಬಸವಣ್ಣನವರಿಗೆ ಎಷ್ಟು ನಮಿಸಿದರೂ ಸಾಲದು. ತನ್ನೆಡೆಗೆ ಬಂದಂತಹ ಎಲ್ಲರನ್ನೂ ಎಂಥವರನ್ನು ಪರಿವರ್ತಿಸುವ ಪರುಷ ಶಕ್ತಿಯ ಮುಂದೆ ತಾನು ಮೊದಲು ಕಂಡ ಗುರು ಶಿಷ್ಯ ಸಂಬಂಧದಲ್ಲಿ ಅಜಗಜಾಂತರ ವ್ಯತ್ಯಾಸ ಕಂಡುಬರುತ್ತಿದೆ ಚೌಡಯ್ಯನವರಿಗೆ. ಗುರು ಬಸವಣ್ಣನವರಂತಹ ಗುರುವಿಲ್ಲ. ಬಸವಾದಿ ಪ್ರಮಥರಂಥ ಶಿಷ್ಯರಿಲ್ಲ ಎಂದೆನಿಸುತ್ತಿದೆ ಚೌಡಯ್ಯನವರಿಗೆ. ಬಸವಾದಿಪ್ರಮಥರ ಗುರುಶಿಷ್ಯ ಸಂಬಂಧವನ್ನು ಎಷ್ಟು ಹೊಗಳುತ್ತಿದ್ದಾರೋ, ಅಷ್ಟೇ ಕಟುವಾಗಿ ನಿಂದಿಸುತ್ತಿದ್ದಾರೆ, ಗೊಡ್ಡು ಸಂಪ್ರದಾಯದ ಗುರುಶಿಷ್ಯ ಸಂಬಂಧವನ್ನು.

ಗುರುಲಿಂಗ ಜಂಗಮವೆಂದರಿಯದ ಗೊಡ್ಡುಗಳ ಶಿಷ್ಯನಮಾಡಿಕೊಂಬವ ಹೆಡ್ಡ ಜಡಜೀವಿಗಳೇನೆಂಬೆನಯ್ಯ, ಆಚಾರ ಅನಾಚಾರದ ಭೇದವನ್ನರಿಯದ ಹೆಡ್ಡ ಮಾನವರಿಗೆ ಉಪದೇಶವ ಕೊಡುವ ಮತಿಭ್ರಷ್ಟರೇನೆಂಬೆನಯ್ಯ, ಅವನ ಅಜ್ಞಾನವನ್ನಳಿಯದ ಅವನ ನಡೆನುಡಿಯ ಹಸನ ಮಾಡದೆ ಅವನ ಆದಿಅಂತ್ಯವ ತಿಳಿಯದೇ, ಧನಧಾನ್ಯ ದ್ರವ್ಯದಾಸೆಗೆ ಶಿವದೀಕ್ಷೆಯ ಮಾಡುವನೊಬ್ಬ ಗುರುವು ಹುಟ್ಟಂಧಕನೆಂಬೆನಯ್ಯ, ತನ್ನ ಗುರುತ್ವವನ್ನರಿಯದ ಗುರುವಿಂದ ಉಪದೇಶವ ಪಡೆದವನೊಬ್ಬ ಶಿಷ್ಯನ ಕೆಟ್ಟಗಣ್ಣವನೆಂಬೆನಯ್ಯ, ಇಂತಿವರ ಗುರುಶಿಷ್ಯರೆಂದೆಡೆ ಇಂತಪ್ಪ ಗುರು ಶಿಷ್ಯರಿಬ್ಬರಿಗೆಯೂ ಯಮದಂಡನೆ ತಪ್ಪದೆಂದಾತ ಅಂಬಿಗರ ಚೌಡಯ್ಯ. ಎಂದು ನೇರ ದಿಟ್ಟವಾಗಿ ನುಡಿದ ವಾಣಿಯಿಂದ ಅಲ್ಲಿ ನೆರೆದ ಶರಣರೆಲ್ಲರಿಗೂ ಕಂಪನವುಂಟಾಯಿತು. ಅದರಲ್ಲೂ ಅಲ್ಲಮ ಪ್ರಭುವಿಗಂತೂ ಆಶ್ಚರ್ಯವುಂಟಾಯಿತು.

"ಬಸವಣ್ಣಾ ನೋಡಿದೆಯಾ ಎಂತಹ ಅಂಬಿಗ, ನಮ್ಮ ಪಡೆಯನ್ನು ಸೇರಿ ಉಜ್ವಲಗೊಳಿಸುತ್ತಿದ್ದಾನೆ, ಇನ್ನು ನೀನು ಕಟ್ಟಿದ ಲಿಂಗಾಯತ ಧರ್ಮವೆಂಬ ಹಡಗು ಸುಲಲಿತವಾಗಿ ಮುನ್ನಡೆಯುವುದಂತೂ ಖಂಡಿತಾ" ಎಂದರು. ಗುರುಬಸವಣ್ಣನವರ ಆನಂದಕ್ಕೆ ಪಾರವಿಲ್ಲದಂತಾಯಿತು. ಎನ್ನಯ್ಯ ಎಂದು ಅಪ್ಪಿಕೊಂಡರು, ಹಾರೈಸಿದರು, ಆಶೀರ್ವದಿಸಿದರು, ಚೌಡಯ್ಯನವರನ್ನು. 'ದೋಣಿ ಸಾಗಲಿ ಮುಂದೆ ಹೋಗಲಿ ಭವ ಸಾಗರ ದಾಂಟಿಸುವುದಕ್ಕೆ ಇನ್ನು ಸನ್ನದ್ಧನಾಗು ನಡೆ ಶರಣ' ಎಂದರು.

ಗುರುವಿನ ಆಜ್ಞೆಯನ್ನು ಶಿರಸಾ ವಹಿಸಿ ಮುನ್ನಡೆಯಲು ಸಾಗಿದ್ದಾರೆ, ವಿಭೂತಿ, ರುದ್ರಾಕ್ಷಿ ಇಷ್ಟಲಿಂಗ ಧಾರಿಯಾಗಿ ಅನುಭವ ಮಂಟಪದಿಂದ ಹೊರಬಂದಿದ್ದಾರೆ ಅನುಭಾವಿಯಾಗಿ, ಮಹಾ ಶರಣನಾಗಿ, ಬಸವಾದಿಪ್ರಮಥರಾಗಿ. ಅಂದು ಅನುಭವ ಮಂಟಪಕ್ಕೆ ಒಳ ಹೋದ ಚೌಡನೆಲ್ಲಿ ಇಂದು ಅನುಭವ ಮಂಟಪದಿಂದ ಹೊರಬಂದ ಶರಣ ಚೌಡಯ್ಯನೆಲ್ಲಿ. ಅಂದು ಆಚಾರವಿಲ್ಲದೆ ನರನಾಗಿದ್ದ, ಇಂದು ಆಚಾರವಿಡಿದು ಗುರುವಾಗಿ ನರಜನ್ಮ ತೊಟ್ಟ ಹಳೆಯ ಬಟ್ಟೆಯ ಕಳಚಿ ಹರಜನ್ಮವೆಂಬ ದಿವ್ಯ ಲಿಂಗ ವಸ್ತ್ರಧಾರಿಯಾಗಿ ಹೊರಬಂದಿದ್ದಾರೆ ಲಿಂಗ ತೇಜಸ್ಸಿನಲ್ಲಿ. ತನ್ನ ಕಾಯಕದ ತೆಪ್ಪದಲ್ಲಿ ಕುಳಿತಾಗ ಅಲ್ಲಿರುವ ಜನ ನೋಡುತ್ತಿದ್ದಾರೆ, ಇವನು ನಮ್ಮ ಅಂಬಿಗ ಹೌದೇ ಅಲ್ಲವೇ ಎಂದು, ಅದರಲ್ಲೊಬ್ಬ ಕೇಳಿಯೇ ಬಿಟ್ಟ; ನೀವು ಪ್ರತಿದಿನ ದೋಣಿ ನಡೆಸುತ್ತಿದ್ದ ಅಂಬಿಗನೇ" ಎಂದು. ಆಗ, ಹೌದು ನಾನೇ ಆ ಅಂಬಿಗ ದೋಣಿ ಹತ್ತಿರಿ ನಿಮ್ಮನ್ನು ದಡಕ್ಕೆ ಮುಟ್ಟಿಸುತ್ತೇನೆ ಎಂದರು, ಶರಣ ಚೌಡಯ್ಯನವರು, ಕೆಲವರು ವಿಸ್ಮಯರಾಗಿ ದೋಣಿಯಲ್ಲಿ ಕುಳಿತರು ಅಂಬಿಗನನ್ನೇ ನೋಡುತ್ತಾ.. ಮತ್ತೊಬ್ಬ ಕೇಳಿದ ಆದರೆ ಅಂದು ನೀವು ಈ ರೀತಿ ಇರಲಿಲ್ಲ. ಈಗ ಮಾತ್ರ ನಿಮ್ಮ ರೂಪವೇ ಬದಲಾಗಿದೆ ಏಕೆ? ಅಂಬಿಗರ ಚೌಡಯ್ಯನವರು ನುಡಿದರು. ಹೌದು ಅಂದು ಇದ್ದಂತೆ ನಾನು ಇಂದಿಲ್ಲ. ಇದು ಗುರು ಬಸವಣ್ಣನವರ ಕೃಪಾ ಕಟಾಕ್ಷ ಅವರು ನನಗೆ ಸಂಸ್ಕಾರ ಕೊಟ್ಟು ಇಷ್ಟ ಲಿಂಗ ವಿಭೂತಿ, ರುದ್ರಾಕ್ಷಿ ಧರಿಸಿ ನನ್ನ ಪಾವನ ಮಾಡಿದ ಮಹಾತ್ಮರಾಗಿದ್ದಾರೆ. ಎಂದರು.

ಆದರೆ ನಿನ್ನಂಥ ಕೀಳು ಜಾತಿಯವನಿಗೆ ದೀಕ್ಷೆ ಎಂದರೇನು ಎಂದು ಕೇಳಿದ ಒಬ್ಬ. ಹೌದು ಗುರು ಬಸವಣ್ಣನವರು ಕೀಳು ಜಾತಿಎಂಬ ಮುಳ್ಳನ್ನೇ ಕಿತ್ತು ಹಾಕಿ ನಾವೆಲ್ಲರೂ ಒಬ್ಬ ದೇವನ ಮಕ್ಕಳು ಎಂದು ಸಾರಿ ಲಿಂಗದೀಕ್ಷೆ ಎಂಬ ಬೀಜವನ್ನು ಬಿತ್ತಿ ಬೆಳೆದಿದ್ದಾರೆ. ಈ ದೀಕ್ಷೆಯಿಂದ ಭವಸಾಗರವನ್ನು ದಾಂಟಿ ಮುಕ್ತಾತ್ಮರಾಗುತ್ತೇವೆಂದು ಹೇಳಿದ್ದಾರೆ ಎಂದರು. ಆಗ ಅಲ್ಲಿದ್ದ ಜಂಗಮ ಲಾಂಛನಧಾರಿಯೊಬ್ಬ ಕೇಳಿದ "ಸಾಧಾರಣ ಅಂಬಿಗ ನೀನು. ಈ ಹೊಳೆಯ ದಾಂಟಿಸ ಬಲ್ಲೆಯೇ ಹೊರತು ಭವಸಾಗರವನ್ನು ದಾಂಟಿಸಲು ಸಾಧ್ಯವೇ? ಎಂದು ಗೇಲಿ ಮಾಡಿದನು. ಮೊದಲೇ ಸ್ವಲ್ಪ ಮುನಿಸಿನ ಚೌಡಯ್ಯನವರು ಬಿರುಸಿನಿಂದ ನುಡಿದರು ಏಕೆ ಸಾಧ್ಯವಿಲ್ಲ? ಅಂಬಿಗ, ಅಂಬಿಗ ಎಂದು ಕುಂದು ನುಡಿಯದಿರಿ. ನಂಬಿದರೆ ಒಂದೇ ಹುಟ್ಟಲಿ ಕಡೆಯ ಹಾಯಿಸುವೆನು ಎಂದು ನುಡಿದರು. ಹಾಗಾದರೆ ನಿನ್ನ ಕೊರಳಲ್ಲಿರುವುದು ಏನು ಎಂದು ಒಬ್ಬ ಕೇಳಿದನು? ಆಗ ಅಂಬಿಗರ ಚೌಡಯ್ಯನವರು ಇದು ದೇವರು ಇನ್ನು ಮುಂದೆ ಇದನ್ನೇ ಪೂಜಿಸುತ್ತೇನೆ ಎಂದರು. ಹಾಗಾದರೆ ನೀನು ಅನೇಕ ದೇವರ ಪೂಜೆಯನ್ನು ಮಾಡುತ್ತಿದ್ದೆ ಈಗ ಹಾಗೆಯೇ ಮಾಡುತ್ತೀಯಾ ಎಂದು ಕೇಳಿದರು. ಆಗ ಅವರು ಹೇಳುತ್ತಾರೆ. ಬ್ರಹ್ಮನ ನಾವು ಬಲ್ಲೆವು, ವಿಷ್ಣುವ ನಾವು ಬಲ್ಲೆವು ತೆತ್ತೀಸ ಕೋಟಿ ದೇವತೆಗಳ ನಾವು ಬಲ್ಲೆವು ಅದೇನು ಕಾರಣವೆಂದರೆ ಇವರು ಹಲವು ಕಾಲ ನಮ್ಮ ನೆರೆಮನೆಯಲ್ಲಿದ್ದರಾಗಿ ಇವರು ದೇವರಲ್ಲೆಂಬುದ ನಾ ಬಲ್ಲೆನಾಗಿ (ತಿಳಿದಿದ್ದೆ) ಈಗ ಒಲ್ಲೆನೆಂದಾತ ಅಂಬಿಗರ ಚೌಡಯ್ಯ.

ಹೌದು ನಾನು ಮೊದಲು ಬ್ರಹ್ಮ, ವಿಷ್ಣು ಹೀಗೆ ಬೇರೆ ಬೇರೆ ದೇವಕೋಟಿಗಳನ್ನು ಪೂಜಿಸುತ್ತಿದ್ದೆ. ಆದರೆ ಗುರುಬಸವಣ್ಣನವರ ಕೃಪೆಯಿಂದ ಅವರು ದೇವರಲ್ಲ ಎಂದು ತಿಳಿಯಿತು. ದೇವರ ಪರಿಕಲ್ಪನೆ ಬಂದಮೇಲೆ ಅವು ದೇವರಲ್ಲ ಎಂದು ತಿಳಿಯಿತು. ಇವರು ಒಂದು ರೀತಿ ನೆರೆಮನೆಯಲ್ಲಿದ್ದವರು ಎಂದು ತಿಳಿದು ಅವರು ಈಗ ಬೇರೆಲ್ಲೋ ಹೋದರು. ಈಗ ಅವು ಬಂದರೂ ಪೂಜಿಸಲಾರೆ ಅವುಗಳ ಗೊಡವೆಗೆ ಹೋಗಲಾರೆ. ಈಗ ನನ್ನ ಭಾಗ್ಯಕ್ಕೆ ಎಣೆಯೇ ಇಲ್ಲ. ಈ ಏಳು ಭುವನಗಳನ್ನೊಳಗೊಂಡ ಮಹಾಘನಲಿಂಗವು ನನ್ನ ಕರಸ್ಥಲದಾಲಯಕ್ಕೆ ಬಂದ ಪರಿಯ ನೋಡಿರಯ್ಯ. ಇದು ಅಪ್ರಮಾಣ ಅಗೋಚರ ಅಪ್ರತಿಮ ಇಷ್ಟಲಿಂಗವ ಬಿಟ್ಟು ಇನ್ನ್ಯಾವದೇವತೆಗಳನ್ನು ಕಣ್ಣೆತ್ತಿಯೂ ನೋಡಲಾರೆ, ಪೂಜಿಸಲಾರೆ, ಇದು ಸತ್ಯ ಎಂದು ನುಡಿದರು. ಈರೇಳು ಭುವನವನೊಳಗೊಂಡ ಎನ್ನ ದೇವನೆಲ್ಲಿ ಸ್ಥಿರವಲ್ಲದ ನೆಲೆಯಿಲ್ಲದ ನಿಮ್ಮ ದೇವನೆಲ್ಲಿ ಎನ್ನ ದೇವಂಗೆ ಅಸುರರ ಮಾಲೆಗಳಿಲ್ಲ, ಬ್ರಹ್ಮ ಕಪಾಲವಿಲ್ಲ, ವೃಷಭನ ವಾಹನವಿಲ್ಲ, ಎಮ್ಮ ದೇವ ನಿರಾಕಾರ, ನಿರ್ಗುಣ, ಬಯಲು ಸ್ವರೂಪ ವಿಶ್ವದ ಪ್ರತಿರೂಪ, ಇದು ಎನಗೆ ಗುರು ಬಸವಣ್ಣನವರು ಅನುಗ್ರಹಿಸಿದ ಪರಾತ್ಪರ ವಸ್ತು. ಇದನ್ನು ಪಡೆಯ ಬೇಕೆಂದರೂ ಬಹಳ ಪುಣ್ಯ ಮಾಡಿರಬೇಕು ಎಂದರು. ಚೌಡಯ್ಯನವರ ಮಾತಿಗೆ ಮರುಳಾಗಿ ಕುಳಿತಿದ್ದ ಇನ್ನೊಬ್ಬ ಯುವಕ ನಿನ್ನ ಜಾತಿ ಈಗ ಏನಾಯಿತು? ಎಂದು ಕೇಳಿದರು.

ಚೌಡಯ್ಯನವರು ಗುರು ಬಸವಣ್ಣನವರು ನಮ್ಮಲ್ಲಿರುವ ಈ ಜಾತಿ ಭ್ರಮೆ, ನೀತಿ ಭ್ರಮೆ ಕರ್ಮಂಗಳನ್ನು ಘಾತಿಸಿ ಕಳೆಯಬಲ್ಲ ನಿಜವಾದ ಯೋಗಿಯಾಗಿದ್ದಾರೆ. ಕ್ಷೇತ್ರ ಭ್ರಮೆ, ತೀರ್ಥ ಭ್ರಮೆ, ಪಾಷಾಣ ಭ್ರಮೆ ಎಂಬ ಕರ್ಮಂಗಳನ್ನು ಕಳೆಯುವ ಇಷ್ಟಲಿಂಗವನ್ನು ಕೊಟ್ಟು ಈ ಭ್ರಮೆಗಳನ್ನೆಲ್ಲಾ ಬಿಡಿಸಿದ್ದಾರೆ. ಅಂಗಕ್ಕೆ ಲಿಂಗವನ್ನು ಧರಿಸುವುದರಿಂದ ದೇಹವೇ ದೇವಾಲಯವಾಗಿ ಅದೇ ದಿವ್ಯಕ್ಷೇತ್ರವಾಗಿ ದೇವನಿರುವ ಈ ಕಾಯವನ್ನು ದಿವ್ಯಕ್ಷೇತ್ರವನ್ನಾಗಿ ಮಾಡಿದ ಮಹಾತ್ಮರಾಗಿದ್ದಾರೆ. ಇನ್ನು ಎನ್ನಂಗಕ್ಕೆ ಲಿಂಗ ಧರಿಸಿಹರೆಂದರೆ ಅಲ್ಲಿ ಪ್ರತಿನಿತ್ಯ ಮೂರು ಬಾರಿ ಪೂಜೆ ಮಾಡುವ ಸ್ವಾತಂತ್ರ್ಯವನ್ನು ಕೊಟ್ಟು ಪುರೋಹಿತ ಶಾಹಿಗಳಿಂದ ದೇವರಿಂದ ದೂರವಿಟ್ಟಿದ್ದ ನಮ್ಮನ್ನು ದೇವರ ಹತ್ತಿರವೇ ಇದ್ದು ಪೂಜಿಸಿ ತೀರ್ಥ ಪ್ರಸಾದವನ್ನು ಪ್ರತಿನಿತ್ಯ ಇಲ್ಲೇ ಪಡೆಯಿವ ಸೌಭಾಗ್ಯವನ್ನು ಕರುಣಿಸಿಕೊಟ್ಟಿದ್ದಾರೆ. ಇದರಿಂದ ನಮಗೆ ತೀರ್ಥ ಕ್ಷೇತ್ರ ಸುತ್ತುವ ಪ್ರಮೇಯವೇ ಇಲ್ಲ. ಕೇವಲ ಕಲ್ಲು ಬಂಡೆಯಂತಿದ್ದ ನಮಗೆ ಸಂಸ್ಕಾರ ಕೊಟ್ಟು ಮೂರ್ತಿಯಾಗಿ ಪರಿವರ್ತಿಸಿ ನಮಗೆ ನೈತಿಕ ಮಟ್ಟದ ಆಧ್ಯಾತ್ಮದ ಶಿಲ್ಪಿಯಾಗಿ ಬಂದು ಶರಣರನ್ನಾಗಿ ಪರಿವರ್ತಿಸಿದ್ದಾರೆ. ಇಲ್ಲಿ ಜಾತಿ ಎಂಬುದೇ ಇಲ್ಲ. ಇವೆಲ್ಲವನ್ನು ಸವಿಸ್ತಾರವಾಗಿ ಕೇಳಿದ ಆತನು ನಾನು ಅನುಭವ ಮಂಟಪಕ್ಕೆ ಬರಲೇ ಎಂದು ಕೇಳಿದನು. ಆಗ ಚೌಡಯ್ಯನವರು ಗಾಳಿ ಬಂದಾಗ ತೂರಿಕೊಳ್ಳಿರಯ್ಯ ಗಾಳಿ ನಿಮ್ಮಾಧೀನವಲ್ಲ. ನಾಳೆ ತೂರಿಹೆನೆಂದಡೆ ಇಲ್ಲಯ್ಯ, ಶಿವಶರಣರೆಂಬುದೊಂದು ಗಾಳಿ ಬಿಟ್ಟಲ್ಲಿದಲ್ಲಿ ಬೇಗ ತೂರಿರೆಂದ ನಮ್ಮ ಅಂಬಿಗರ ಚೌಡಯ್ಯ.

ತಮ್ಮಾ ನಿನ್ನ ಮನಸ್ಸಿಗೆ ಇಷ್ಟು ಆಸೆಯಾಯಿತೆಂದರೆ ಬೇಗ ನೀನು ಈ ಕೆಲಸವನ್ನು ಮಾಡು. ಇಲ್ಲದಿದ್ದರೆ ಆಯುಷ್ಯ ಎಂಬುದು ಇಂದೋ ನಾಳೆಯೋ ಹೇಳುವುದಕ್ಕಾಗುವುದಿಲ್ಲ ಅಲ್ಲದೆ ಮನಸ್ಸು ಚಂಚಲ ಈಗ ಇಷ್ಟಪಟ್ಟದ್ದು ಇನ್ನು ಸ್ವಲ್ಪಹೊತ್ತಿಗೆ ಬೇಡ ಎನ್ನಬಹುದು ಆದ್ದರಿಂದ ಬೇಗ ನೀನು ಶರಣ ಮಾರ್ಗಕ್ಕೆ ಬರಲು ತಯಾರಾಗು ಎಂದು ಹೇಳಿದರು. ಅದರಂತೆ ಆ ಯುವಕನು ಉತ್ಸಾಹಗೊಂಡು ನಡೆದನು ಅನುಭವ ಮಂಟಪಕ್ಕೆ. ಹೀಗೆ ಚೌಡಯ್ಯನವರು ಪ್ರತಿಯೊಬ್ಬರಿಗೂ ಉಪದೇಶ ಮಾಡುತ್ತಲೇ ಜನರ ಅಜ್ಞಾನದ ಕಣ್ಣು ತೆರೆಸುತ್ತಿದ್ದರು. ಬಂದಬಂದವರನ್ನೆಲ್ಲಾ ಎಚ್ಚರಿಸುತ್ತಿದ್ದರು. ಅವರನ್ನೆಲ್ಲಾ ಭೌತಿಕವಾದ ಕೆರೆ

ದಾಂಟಿಸುವುದರ ಜೊತೆಗೆ ಗುರು ಬಸವಣ್ಣನವರು ಕಟ್ಟಿದ ಲಿಂಗಾಯತ ಧರ್ಮವೆಂಬ ಹಡಗಿನಲ್ಲಿ ಕೂರಿಸುತ್ತಾ ಭವಸಾಗರವ ದಾಂಟಿಸುತ್ತೇನೆ ಬನ್ನಿ ಬನ್ನಿ ಎಂದು ಕರೆಯುತ್ತಿದ್ದರು.

ತಡೆನೆಲೆಯಿಲ್ಲದ ಮಹಾನದಿಯಲ್ಲಿ ಒಡಲಿಲ್ಲದಂಬಿಗ ಬಂದಿದ್ದೇನೆ. ಹಿಡಿವ ಬಿಡುವ ಮನವ ಬೆಲೆಗೊಟ್ಟೊಡೆ ಕಡೆಗಾಣಿಸಿ ಹಾಯಿಸುವೆ ಮಹಾಹೊಳೆಯ. ನುಡಿಯಿಲ್ಲದ ನಿಸ್ಸೀಮ ಗ್ರಾಮದಲ್ಲಿರಿಸುವೆನೆಂದಾತ ಅಂಬಿಗರ ಚೌಡಯ್ಯ. ಎಂತೆಂಥವರೂ ಹೌಹಾರುವ ಹೊಳೆಯಿದು. ಹುಟ್ಟು ಸಾವಿನ ಹೊಳೆಯಿದು. ಸಂಸಾರದ ಹೊಳೆಯಿದು. ಇದನ್ನು ದಾಟಿಯೇ ತೀರುವೆನೆಂಬ ಎದೆಗಾರಿಕೆ ಬಂದದ್ದು ಗುರು ಬಸವಣ್ಣನವರಿಂದ. ಅವರೊಬ್ಬರೇ ದಾಟಲು ಇಷ್ಟಪಡಲಿಲ್ಲ. ಸ್ವಾರ್ಥ ಜೀವಿಯೂ ಅವರಾಗಿರಲಿಲ್ಲ. ಗುರು ಬಸವಣ್ಣನವರು ಹೇಳಿದಂತೆ ನಿಸ್ವಾರ್ಥವಾದ ಬದುಕಿನಿಂದ ಬಾಳುತ್ತಿರುವ ಇವರು ತಮ್ಮೊಂದಿಗೆ "ನಾನೂ ದಾಟಬಲ್ಲೆ, ನಿಮ್ಮನ್ನೂ ದಾಂಟಿಸಬಲ್ಲೆ" ಎಂಬ ಮನೋಸ್ಥೈರ್ಯ ಬಂದದ್ದು ಗುರು ಬಸವಣ್ಣನವರಿಂದ. "ಚಂದಗೆಟ್ಟವರೆಲ್ಲಾ ಬಂದೇರಿ ದೋಣಿಯನು, ಶಿವನೊಂದೇ ಠಾವಿಗೊಯ್ದುಳುಹುವೆ." ಎಂದು ಧೈರ್ಯದಿಂದ ಹೇಳುವುದರ ಜೊತೆಗೆ ಇತರರಿಗೂ ಧೈರ್ಯತುಂಬುತ್ತಿದ್ದಾರೆ. ಇದಕ್ಕೆ ಯಾವ ದುಡ್ಡು ಕಾಸನ್ನು ಕೇಳುತ್ತಿಲ್ಲ. ನಿಮ್ಮ ಹಿಡಿವ ಬಿಡುವ ಮನಸ್ಸನ್ನು ಕೊಡಿ. ಭವಸಾಗರ ದಾಂಟಿಸುವ ಜವಾಬ್ದಾರಿ ನನ್ನದು ಎಂದು ಘೋಷಣೆ ಮಾಡುತ್ತಿದ್ದಾರೆ ಬನ್ನಿ ಅನುಭಾವ ಮಂಟಪಕ್ಕೆ ಎಂದು ಕರೆಯುತ್ತಿದ್ದಾರೆ.

ಒಬ್ಬ ಹೀಗೆ ಕೇಳುತ್ತಾನೆ. ನಾವು ಅಲ್ಲಿಗೆ ಬಂದರೆ ಊಟ ಬಟ್ಟೆಗೆ ಏನು ಮಾಡಬೇಕು? ಸದ್ಯ ಹೊಟ್ಟೆಗೆ ಅನ್ನ ಸಿಕ್ಕರೆ ಸಾಕಾಗಿದೆ. ಅದರ ಜೊತೆಗೆ ಮಕ್ಕಳು ಮರಿ ಹೆಂಡತಿ ಸಾಕುವುದಂತು ಸಾಕು ಸಾಕಾಗಿದೆ. ಇಂತಹ ಒಂದು ಸಂದಿಗ್ದ ಪರಿಸ್ಥಿತಿಯಲ್ಲಿ ನಾವು ಅಲ್ಲಿಗೆ ಬರುವುದಾದರೂ ಹೇಗೆ ಎಂದು ಕೇಳಿದರು? ಅದಕ್ಕೆ ಚೌಡಯ್ಯನವರು

ಬಡತನಕ್ಕೆ ಉಂಬುವ ಚಿಂತೆ;
ಉಣಲಾದರೆ ಉಡುವ ಚಿಂತೆ;
ಉಡಲಾದರೆ ಇಡುವ ಚಿಂತೆ;
ಇಡಲಾದರೆ ಹೆಂಡಿರ ಚಿಂತೆ;
ಹೆಂಡಿರಾದರೆ ಮಕ್ಕಳ ಚಿಂತೆ;
ಮಕ್ಕಳಾದರೆ ಬದುಕಿನ ಚಿಂತೆ;
ಬದುಕಾದರೆ ಕೇಡಿನ ಚಿಂತೆ;
ಕೇಡಾದರೆ ಮರಣದ ಚಿಂತೆ;
ಇಂತೀ ಹಲವು ಚಿಂತೆಯಲ್ಲಿ ಇದ್ದವರ ಕಂಡೆನು
ಶಿವಚಿಂತೆಯಲ್ಲಿ ಇದ್ದವರನೊಬ್ಬರನೂ ಕಾಣೆ ಎಂದ ಅಂಬಿಗರ ಚೌಡಯ್ಯ

ಗುರು ಬಸವಣ್ಣನವರು ಹೇಳುತ್ತಿದ್ದಾರೆ ಶಿವ ಚಿಂತೆ ಶಿವಜ್ಞಾನವಿಲ್ಲದವರು ಸಗಣಕ್ಕೆ ಸಾಸಿರ ಹುಳು ಹುಟ್ಟವೆ ದೇವ? ಕಾಡ ಮೃಗ ಒಂದಾಗಿರಲಾರವೆ ದೇವ? ಎಂದು.

ಅಂದರೆ ಮಾನವ ಜನ್ಮ ಶ್ರೇಷ್ಠವಾದ ಜನ್ಮ – ಇದು ಅರಿವಿನ ಜನ್ಮ ಯಾವುದು ತಪ್ಪು ಯಾವುದು ಸರಿ ಎಂದು ನಿರ್ಧರಿಸಿ ಬದುಕುವಂಥ ಜನ್ಮ ಇಂತಹ ಮಾನವ ಜನ್ಮವನ್ನು ನಮಗೆ ದೇವನು ವರವಾಗಿ ಕೊಟ್ಟಿದ್ದಾನೆ. ಅದನ್ನು ಸರಿಯಾಗಿ ಬಳಸಿಕೊಳ್ಳದಿದ್ದರೆ ನಮ್ಮಷ್ಟು ಅಜ್ಞಾನಿಗಳು ಇಲ್ಲ. ಆ ಕಾಗೆ ಕೋಳಿಗಳಿಗಿಂತಲೂ ಕನಿಷ್ಟರಾಗುತ್ತೇವೆ. ದೇವರು ನಮ್ಮನ್ನು ಸೃಷ್ಟಿಸುವ ಜೊತೆಜೊತೆಗೆ ಇಳೆ, ಗಾಳಿ, ಬೆಳಕು, ಎತ್ತು, ಬಿತ್ತು ಎಲ್ಲವನ್ನೂ ಕೊಟ್ಟಿದ್ದಾನೆ.

ಅದಕ್ಕೆ ಕೃತಜ್ಞತೆಯಿಂದ ದೇವನನ್ನು ಆರಾಧಿಸಬೇಕಾಗಿದೆ. ಇದನ್ನು ಬಿಟ್ಟು ನಮ್ಮ ಚಿಂತೆಯಲ್ಲಿರುವುದು ಮೂರ್ಖತನ. ಕಲ್ಯಾಣದ ಶರಣರು ಸಂಸಾರಿಗಳಾಗಿದ್ದಾರೆ. ಅವರು ಎಂತಹ ನಿಶ್ಚಿಂತವಾದ ಬದುಕನ್ನು ಬಾಳುತ್ತಿದ್ದಾರೆ ಎಂದರೆ ಬಡತನ ಹೋಗಲಾಡಿಸಲು ಸತ್ಯಶುದ್ಧ ಕಾಯಕ ಕೈಗೊಂಡಿದ್ದಾರೆ. ತಾವು ಉಪಯೋಗಿಸಿಕೊಂಡು ಉಳಿದದ್ದನ್ನು ದಾಸೋಹ ಮಾಡುತ್ತಿದ್ದಾರೆ. ಅದರ ಜೊತೆಜೊತೆಯಲ್ಲಿ ಬಿಡುವಿನ ವೇಳೆ ಅನುಭವ ಮಂಟಪಕ್ಕೆ ಹೋಗಿ ಅಲ್ಲಿ ಜ್ಞಾನವನ್ನು ಪಡೆಯುತ್ತಾರೆ. ಸತಿ ಪತಿ ಒಂದಾಗಿ ಬದುಕುವುದನ್ನು ಕಲಿತಿದ್ದಾರೆ. ನ್ಯಾಯ, ನೀತಿ ಧರ್ಮಗಳಿಂದ ಬಾಳುತ್ತಿದ್ದಾರೆ. ಅವರಿಗೆ ನೀವು ಹೇಳಿದಂತೆ ಯಾವ ಚಿಂತೆಯೂ ಇಲ್ಲ. ಅವರು ಪರಮಾತ್ಮನ ಚಿಂತನೆಯನ್ನು ಮಾತ್ರ ಮಾಡುತ್ತಾರೆ. ಅಂಗದಲ್ಲಿ ಲಿಂಗ ಧರಿಸಿ ಸಾಮೂಹಿಕ ಇಷ್ಟ ಲಿಂಗಾರ್ಚನೆಯಲ್ಲಿ ತೊಡಗುತ್ತಾರೆ. ಆ ದೃಶ್ಯ ಕಣ್ಣಿಗಿಂತ ಮನಸ್ಸಿಗಂತೂ ಆನಂದ ತರುತ್ತದೆ. ಈ ಆನಂದ ಅನುಭವಿಸಲು ಮನಶ್ಶಾಂತಿ ಪಡೆಯಲು ಈ ಆಧ್ಯಾತ್ಮಿಕ ರಂಗ ಪ್ರವೇಶ ಮಾಡಿದರೆ ಮಾತ್ರ ಸಾಧ್ಯ. ಇಲ್ಲದಿದ್ದರೆ ಇದೇ ಚಿಂತೆಯಲ್ಲಿ ದಹಿಸಿಹೋಗುತ್ತೀರ. ಅಲ್ಲಿ ನಡೆಯುವ ಚಿಂತನ ಮಂಥನದಿಂದ ಬೆಳಗುತ್ತೀರ ನಿಮ್ಮ ಬಾಳನು ಬೆಳಗಿಸಿಕೊಳ್ಳುತ್ತೀರ ಬನ್ನಿ ಎಂದು ಕರೆಯುತ್ತಾ, ಬಂದವರನ್ನು ಗುರು ಬಸವಣ್ಣನವರಲ್ಲಿಗೆ ಕರೆದುಕೊಂಡು ಬರುತ್ತಿದ್ದರು ಈ ಕಲ್ಯಾಣದ ಶರಣರು.

***

ಧನ ದಾಸೋಹಿಗಳಲ್ಲಿ ಕೋರಿಕೆ

ಬಸವ ವಚನಾಮೃತ

ಬಸವ ವಚನಾಮೃತ ಪುಸ್ತಕ ಲಭ್ಯವಿರುವ 1416 ವಚನಗಳಿಗೆ ವ್ಯಾಖ್ಯಾನ ಸಹಿತವಾಗಿ ಭಾಗ-1(1008 ವಚನ) ಭಾಗ-2(408 ವಚನ) ಹೀಗೆ ಮುದ್ರಣಗೊಂಡಿದ್ದು ಪ್ರತಿಗಳು ಮುಗಿದು ಹೋಗಿವೆ. ಎರಡೂ ಭಾಗ ಸೇರಿಸಿ ಮುದ್ರಿಸಲು ಸಂಕಲ್ಪಿಸಲಾಗಿದೆ. ಸುಮಾರು ಒಂಬತ್ತು ನೂರು ಪುಟ ಆಗಬಹುದು. ಬಹಳ ಖರ್ಚು ಬರುತ್ತದೆ. ಆದ್ದರಿಂದ ದಾಸೋಹಿಗಳು 15000/-(ಹದಿನೈದು ಸಾವಿರ)ರೂದಂತೆ ಧನ ಸಹಾಯ ಮಾಡಿದರೆ ಅವರ ಹೆಸರಿನಲ್ಲಿ ಕೆಲವು ಪ್ರತಿ ಮುದ್ರಿಸಲಾಗುವುದು.

ಬಸವ ಧರ್ಮದ ಸಂಸ್ಕಾರಗಳು

ಹುಟ್ಟಿನಿಂದ ಸಾವಿನವರೆಗೆ ನಡೆಸಬೇಕಾದ ಧಾರ್ಮಿಕ ವಿಧಿವಿಧಾನಗಳು ಪುಸ್ತಕ "ಬಸವ ಧರ್ಮ ಸಂಸ್ಕಾರಗಳು" ಪ್ರತಿಗಳು ಮುಗಿದುಹೋಗಿ ಬಹಳ ಸಮಯವಾಯಿತು. ಪುಸ್ತಕ ಅತೀ ಅವಶ್ಯವಿದೆ. ಮುದ್ರಣಕ್ಕೆ ಸಂಕಲ್ಪಿಸಲಾಗಿದೆ. ದಾನಿಗಳಿಂದ ಸಹಾಯ ಅಗತ್ಯವಿದೆ. ನೆರವು ನೀಡುವ ದಾನಿಗಳು 11000/-(ಹನ್ನೊಂದು ಸಾವಿರ)ರೂ ಕೊಟ್ಟರೆ ಅವರ ಹೆಸರಲ್ಲಿ ಕೆಲವು ಪ್ರತಿ ಮುದ್ರಿಸಲಾಗುವುದು. ಡಿ ಡಿ ಮೂಲಕ ಹಣ ಕಳಿಸುವವರು Vishwakalyana Mission Charitable Trust ಎಂದು ತೆಗೆಸಬೇಕು. ಹಣ ವರ್ಗಾವಣೆ ಮಾಡುವವರು Bank of India, Rajajinagar, Bangalore-560010
SB A/c 840610100016409,IFSC Code-BK1D0008406 ದಾನಿಗಳು ತಮ್ಮ ಫೋಟೋ ಮತ್ತು ವಿವರವಾದ ಪರಿಚಯ ಬರೆದು ಕಳಿಸಬೇಕು. ಡಿಡಿ/ಚೆಕ್ ಕಳಿಸುವವರು ಕೆಳಗಿನ ವಿಳಾಸಕ್ಕೆ ಕಳಿಸಬೇಕು.

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್, ಬಸವ ಮಂಟಪ, 2035, 20ನೇ ಮೇನ್‌ರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010, ದೂ:9448137508

ಅಕ್ಕನ ಯೋಗಾಂಗ ತ್ರಿವಿಧಿ ಭಾಗ-5

- ಪೂಜ್ಯ ಶ್ರೀ ಜಗದ್ಗುರು
ಬಸವ ಕುಮಾರ ಸ್ವಾಮೀಜಿ

(21ನೇ ವಚನದ ಭಾವಾರ್ಥ ಮುಂದುವರಿದ ಭಾಗ)

ಕಿವಿ: ಜಾತಿ, ಮತ, ಪಂಥ, ಸ್ತ್ರೀ-ಪುರುಷ, ಶ್ರೇಷ್ಠ-ಕನಿಷ್ಠ, ಮೇಲು-ಕೀಳು ದ್ವಂದ್ವ ಭಾವನೆ ಶತಮಾನಗಳಿಂದ ಅಜ್ಞಾನದಿಂದ ಕೇಳಿ ಕೇಳಿ ಬಂದಿದೆ. ಅದೇ ಕಿವಿಗಳಿಂದ ಆಚಾರ-ವಿಚಾರಗಳಿಂದ ಕೂಡಿದ ಸದ್ಗುರುವಿನಿಂದ ಹಿತೋಪದೇಶ, ಧರ್ಮೋಪದೇಶ, ಮಂತ್ರಗಳನ್ನು ಕೇಳಿದಾಗ ಜೀವನ ಪಾವನವಾಗುವುದು.

ಮೂಗು: ಪ್ರಾಕೃತಿಕವಾಗಿ ಜೀವನಾಧಾರವಾದ ಉಸಿರನ್ನು ತೆಗೆದುಕೊಳ್ಳುವುದು ಬಿಡುವುದು ಜೀವಕುಲದ ಪ್ರಾಣ. ಇಂಥ ಉಸಿರನ್ನು ಮೂಗಿನ ಮುಖಾಂತರ ಅಂಗೈಯಲ್ಲಿ ಇಷ್ಟಲಿಂಗವನ್ನು ಇರಿಸಿ ತ್ರಾಟಕಯೋಗ ಮಾಡುತ್ತಾ ಆಧಾರದಿಂದ ಬ್ರಹ್ಮರಂಧ್ರದವರೆಗೆ ತಡೆಹಿಡಿದು ಏರಿಸುತ್ತಾ ಹೋದರೆ ಚಿದ್ರಸ, ಚಿಧಂಮೃತವನ್ನು ಪಾನ ಮಾಡಬಹುದು. ಪ್ರಾಕೃತಿಕ ಉಸಿರು ಲಿಂಗದ ಉಸಿರಾಗಿ ದೈವೀಕರಣಗೊಳ್ಳುವುದು ಮೂಗಿನ ಮುಖಾಂತರ.

ಬಾಯಿ: ಇದೂ ಒಂದು ಅದ್ಭುತ. ಇದರಲ್ಲಿ 32 ಸುಂದರವಾದ ಹಲ್ಲುಗಳು, ಸುಂದರವಾದ ಮೃದುವಾದ ನಾಲಿಗೆ, ಗಂಟಲು, ಧ್ವನಿಪೆಟ್ಟಿಗೆ, ಜೀವನಾವಶ್ಯಕವಾದ ಪದಾರ್ಥವನ್ನು ಹಲ್ಲು ನಾಲಿಗೆಯಿಂದ ನುರಿಸಿ ಲಾಲಾರಸದೊಂದಿಗೆ ಹೊಟ್ಟೆಯೊಳಗೆ ಹೋಗುವ ದ್ವಾರ ಬಾಯಿಯಿಂದ ಮಾತನಾಡುವುದು, ಹಾಡುವುದು, ತಿನ್ನುವುದು, ಲೌಕಿಕವಾಗಿ ಏನೇನೋ ತಿನ್ನುವುದು. ಏನೇನೋ ಹಾಡುವುದು, ಏನೇನೋ ಮಾತನಾಡುವುದು. ಇದರಿಂದ ಮನುಷ್ಯ ಭವಕ್ಕೆ ಸಾಗುತ್ತಾನೆ. ಆದರೆ ಸಾತ್ವಿಕ ಆಹಾರ ಸೇವನೆ, ಒಳ್ಳೆಯ ಹಾಡು, ಮಂತ್ರಪಠಣ, ಹಿತವಾದ ಮಾತು.

"ಮಾತಿನಿಂ ನಗೆನುಡಿಯು ಮಾತಿನಿಂ ಹಗೆ ಕೊಲೆಯು
ಮಾತಿನಿಂ ಸಕಲ ಸಂಪದವು। ಲೋಕದೋಳ್
ಮಾತೇ ಮಾಣಿಕ್ಯ ಸರ್ವಜ್ಞ॥

"ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ." ಮಾತು ಬಲ್ಲವ ಮಾಣಿಕ್ಯ ತಂದ, ಮಾತೆಂಬುದು ಜ್ಯೋತಿರ್ಲಿಂಗ. ಕೆರೆಹಳ್ಳ ಭಾವಿಗಳು ಮೈದೆರೆದರೆ ಗುಳ್ಳೆ ಗೊರಚೆ ಚಿಪ್ಪುಗಳ ಕಾಣಬಹುದು. ವಾರಿಧಿ ಮೈದೆರೆದರೆ ಮುತ್ತು ರತ್ನಂಗಳ ಕಾಣಬಹುದು. ಲಿಂಗದೇವನ ಶರಣರು ಮನದೆರೆದು ಮಾತನಾಡಿದರೆ ಲಿಂಗವೇ ಕಾಣಬಹುದು" ಎಂದು ಧರ್ಮಗುರು ಬಸವಣ್ಣನವರು ಅನುಭಾವದ ನುಡಿಯನ್ನು ನುಡಿದಿದ್ದಾರೆ. ಶ್ರೀ ಗುರು ವಚನೋಪದೇಶವನಾಲಿಸಿದಾಗಳಹುದು ನರರಿಗೆ ಮುಕುತಿ" ಎಂದು ನಿಜಗುಣ ಶಿವಯೋಗಿಗಳು ಕೈವಲ್ಯಪದ್ಧತಿಯಲ್ಲಿ ಆದೇಶಿಸಿದ್ದಾರೆ.

"ಜನನೇಂದ್ರಿಯ": ಮೂತ್ರವು ಬಿಂದುವು ಒಂದು ನಾಳದಲ್ಲಿ ಬರ್ಕು, ಒಂದಬಿಟ್ಟು ಒಂದ ತಡೆದರೆ ಪರಬ್ರಹ್ಮನು ಒಂದು ಅಕ್ಕು ಸರ್ವಜ್ಞ॥ Utilisation of sex or Sublimation of sex but suppression of sex is more dangerous. ಕಾಮವನ್ನು (ಬಿಂದು

ಅಥವಾ ವೀರ್ಯ) ಸದ್ಬಳಕೆ ಮಾಡುವುದು ಇಲ್ಲವೆ ಉದಾತ್ತೀಕರಿಸುವುದು. ಆದರೆ ಹತ್ತಿಕ್ಕಬಾರದು. ಕಾಮವನ್ನು ಉದಾತ್ತೀಕರಿಸಿದಾಗ ವಿರಕ್ತ -ಸನ್ಯಾಸಿ-ಜಂಗಮ-ಯೋಗಿಯಾಗಿ ಅಮೃತ ಪಾನ ಮಾಡುತ್ತಾನೆ. ಜನನ-ಮರಣ ಚಕ್ರದಿಂದ ಬಿಡುಗಡೆಯಾಗುತ್ತಾನೆ. ಇದು ಬ್ರಮ್ಹಚಾರಿಗೂ ಅನ್ವಯ.

ಗುದೇಂದ್ರಿಯ: ಈ ಸ್ಥಾನ ಆಧಾರ ಚಕ್ರ-ಆಧಾರಸ್ಥಾನ ಕುಂಡಲಿನಿ ಶಕ್ತಿ- ಕುಂಡಲಿನಿ ಸರ್ಪದ ಈ ಸ್ಥಾನ ಕೊಳೆಯನ್ನು ಅಪಾನವಾಯುವನ್ನು ಹೊರಹಾಕುವುದಷ್ಟೆ ಅಲ್ಲ. ಯೋಗಶಕ್ತಿಯಿಂದ ಊರ್ಧ್ವಕ್ಕೆ ಏರಿಸುವ ಮೂಲಸ್ಥಾನ ಅದ್ಭುತ ಶಕ್ತಿ ಕೇಂದ್ರ. ಈ ರೀತಿಯಲ್ಲಿ ಒಂಬತ್ತು ದ್ವಾರದ ಮಹತಿಯನ್ನರಿತ ಮಹಾಶಿವಯೋಗಿಣಿ ಅಕ್ಕಮಹಾದೇವಿಯವರು ಎಲ್ಲಾ ಶಕ್ತಿಗಳನ್ನು ಕ್ರೋಢೀಕರಿಸಿ ಆಧಾರ ಚಕ್ರದಿಂದ ಬೆನ್ನುಹುರಿಯ ಮಧ್ಯದಲ್ಲಿ ಹೊರಟು ಸುಷುಮ್ನ ನಾಡಿಗುಂಟ ಬ್ರಹ್ಮರಂಧ್ರದ (ತಲೆಯ ನೆತ್ತಿಯ ಭಾಗ)ದವರೆಗೆ ಏರಿಸಿದಾಗ ಅಲ್ಲಿ ಅಮೃತದ ಕುಂಡ ಒಡೆದು ಸುರಿಯಿತು ಎಂದು ಮಹದಾನಂದವನ್ನು ವ್ಯಕ್ತಪಡಿಸಿದ್ದಾರೆ.

22. ಆರು ಮುಖದ ಮುತ್ತನ್ನು ನೀರೊಳಗೆ ಇರಿಸಲು
ನೀರಳಿದ ಮುತ್ತು ಉಳಿಯಲು। ಆ ಮಣಿಯ
ಸೇರಿಸದೆನೆನ್ನಯ ಉರದೊಳಗೆ ॥

ಭಾವಾರ್ಥ: ನಮ್ಮ ಶರೀರದಲ್ಲಿ ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ ವಿಶುದ್ಧಿ, ಆಜ್ಞಾ ಎಂಬ ಆರು ಚಕ್ರಗಳು. ಆರು ಚಕ್ರಗಳಲ್ಲಿ ಶಕ್ತಿ ಕೇಂದ್ರಗಳಿವೆ. ಗುದದ್ವಾರ, ಜನನೇಂದ್ರಿಯ, ನಾಭಿ, ಹೃದಯ, ಕಂಠಸ್ಥಾನ, ಭ್ರೂಮಧ್ಯ ಇಲ್ಲಿ ಕ್ರಮಬದ್ಧವಾಗಿ ಆಚಾರಲಿಂಗ, ಗುರುಲಿಂಗ, ಜಂಗಮಲಿಂಗ, ಶಿವಲಿಂಗ, ಪ್ರಸಾದಲಿಂಗ, ಮಹಾಲಿಂಗ ಅನ್ನುವ ಶ್ರೇಷ್ಠ ಮುತ್ತುಗಳನ್ನು ಪ್ರತಿಷ್ಠಾಪನೆ ಮಾಡಲು ಅನಿಮಿಷ ದೃಷ್ಟಿಯಿಂದ ಜಪಯೋಗವನ್ನು ನಿಗ್ರಹಶಕ್ತಿಯಿಂದ ಮನಸ್ಸನ್ನು ಊರ್ಧ್ವ ಮುಖ ಮಾಡುತ್ತಾ ಹೋದಾಗ ಮಾತ್ರ ಸಾಧ್ಯ. ಇದು ಶ್ರದ್ಧಾ, ನಿಷ್ಠಾ, ಅವಧಾನ, ಅನುಭವ, ಆನಂದ, ಸಮರಸ ಈ ಭಕ್ತಿಗಳಿಂದ ಅನುಸಂಧಾನವನ್ನು ಮಾಡುತ್ತಾ ಸಮರ್ಪಣಾ ಭಾವದಿಂದ ಮುನ್ನಡೆದರೆ ನಾವು ಸಮಾಧಾನ ಶಾಂತಿ ನೆಮ್ಮದಿಯನ್ನು ಪಡೆಯುತ್ತೇವೆ. ನೀರಿನಂತಹ ಚಂಚಲ ಮನಸ್ಸು ಅಳಿದು ಮೇಲೆ ಹೇಳಿದ ಮುತ್ತುಗಳು ಉಳಿಯಲು ಬೆಳಗನ್ನು ನೀಡುವ ಮಣಿಯಂತಹ ಜ್ಞಾನಶಕ್ತಿಯನ್ನು ನನ್ನ ಹೃದಯದಲ್ಲಿ ಸೇರಿಸಿದೆನು ಎಂದು ಅನುಭಾವವನ್ನು ನುಡಿಯುತ್ತಿದ್ದಾರೆ ಅಕ್ಕಮಹಾದೇವಿ.

(ಮುಂದುವರಿಯುವುದು..)

ವಚನ ಕಿರಣ

–ಪೂಜ್ಯ ಶ್ರೀ ಮಾತೆ ಜ್ಞಾನೇಶ್ವರಿ

1. ತ್ಯಾಗ ಮೆರೆಸಿ ಶೋಕ ಮರೆಸಿ
ಜ್ಞಾನ ಧರಿಸಿ ಮೌಢ್ಯವ ತೊಲಗಿಸಿ
ಹಸನಾದ ಕಾರ್ಯವಂ ಗೈದು
ಬಸವ ತತ್ವ ಸುಧೆಯ ಜಗಕಿತ್ತು
ಜನಮನದ ಕೊಳೆಯ ಕಳೆದು
ನಡೆದಿಹರು ಬಸವಾತ್ಮಜೆ
ಲೀಲಾವಿಶೇಷ ಲಿಂಗದೇವನ
ದಿವ್ಯ ತೇಜದಲ್ಲಿ.

2. ಚಂಚಲ ಮನಕ್ಕೆ ಧ್ಯಾನವೇ ಆಧಾರ
ಅನಾರೋಗ್ಯಕ್ಕೆ ಯೋಗವೇ ಆಧಾರ
ವಚನಾಧ್ಯಯನಕ್ಕೆ ಮನವೇ ಆಧಾರ
ಲೀಲಾವಿಶೇಷ ಲಿಂಗದೇವನ ಪೂಜೆಗೆ
ಬಸವ ಭಕ್ತಿಯೇ ಆಧಾರ.

‘ಚತುರ್ ಶರಣೋತ್ಸವ’ಆಚರಣೆ

ಐತಿಹಾಸಿಕ ಶಿವ ಒಬ್ಬರಲ್ಲ, ಎಂಬತ್ತೆಂಟು ಪೀಠಾಧಿಪತಿಗಳಾಗಿ ಹೋಗಿದ್ದಾರೆ.

ಯೋಗಿರಾಜ, ನಟರಾಜ, ವೈದ್ಯನಾಥ, ನಾದಲೋಲ, ೬೪ ವಿದ್ಯೆಗಳ ಪಂಡಿತ, ಮೃತ್ಯುಂಜಯ, ತಪಸ್ವಿ ಹೀಗೆ ಕರೆಸಿಕೊಂಡ “ಶಿವ” ಐತಿಹಾಸಿಕ ಪುರುಷ, ಒಬ್ಬರಲ್ಲ. ಭಾರತೀಯ ಪರಂಪರೆಯ ಮೂಲಿಗನಾದ “ಶಿವ”- ಎನ್ನುವುದು ಇತಿಹಾಸದಲ್ಲಿ ದಾಖಲಾದ ಒಂದು ಪರಂಪರೆಯ ಪೀಠ. ಹೀಗೆ ಅನೇಕರು ಆ ಪೀಠಕ್ಕೆ ಅಧಿಪತಿಗಳಾಗಿ ಹೋಗಿದ್ದಾರೆ ಎಂದು ‘ಸಿಂಧು ಸಂಸ್ಕೃತಿ ‘ ಗ್ರಂಥ ಲೋಕಾರ್ಪಣೆಯಾದ ಸಂದರ್ಭದಲ್ಲಿ ಪೂಜ್ಯ ಮಾತಾಜಿ ಹೇಳಿದರು. ಈ ಬೆಳಗಾವಿಯಲ್ಲಿ ನಡೆದ ಶರಣೋತ್ಸವದಲ್ಲಿ ಮಾತನಾಡುತ್ತಾ ‘ರಾಷ್ಟ್ರೀಯ ಬಸವ ದಳ’ ಎಂಬ ಪರಿಕಲ್ಪನೆಯಲ್ಲಿ ರಾಷ್ಟ್ರ ಮತ್ತು ಧರ್ಮಗಳ ಪ್ರಜ್ಞೆ ಸಂಘಟಿತ ವಾಗಿರುವುದಾಗಿದೆ. ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ರಾಷ್ಟ್ರ ಮತ್ತು ಧರ್ಮಗಳು ಅವಿಭಾಜ್ಯ ಅಂಗಗಳು. ಈ ತತ್ವವನ್ನು ಅನುಸರಿಸಿದರೆ ನಮ್ಮ ಸಮಾಜ ಅಭಿವೃದ್ಧಿ ಪಥದಲ್ಲಿ ಮುನ್ನೆಡೆಯುತ್ತದೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಮನುಷ್ಯ ಮೂರು ಮುಖ್ಯ ವಿಭಾಗಗಳ ಕೂಡುವಿಕೆಯಿಂದಾದ ಒಂದು ಜೀವಿಯಾಗಿದ್ದಾನೆ- ತನು, ಮನ ಮತ್ತು ಆತ್ಮ – ಇವುಗಳಿಗೆ ಉತ್ತರವೇ ಆಹಾರ, ಪೂಜೆ ಮತ್ತು ಪ್ರಾರ್ಥನೆ, ಜ್ಞಾನ, ಕಾಯಕ. ದಾಸೋಹ ಮತ್ತು ಧ್ಯಾನ ಬೇಕು. ಈಗಿನ ಯಾಂತ್ರಿಕ ಯುಗದಲ್ಲಿ, ಅಮೇರಿಕನರು ಹೇಳುವಂತೆ `Rat Race’ ನಲ್ಲಿ ಮನುಷ್ಯ ಜೀವನ ನಡೆಸುತ್ತಿದ್ದಾನೆ. ನಗರೀಕರಣ ವಿಪರೀತವಾಗಿ ಆಗುತ್ತಿದೆ. ಮೌಲ್ಯಗಳು ಕುಸಿಯುತ್ತಿವೆ. ಆದರೆ, ಮೂಢನಂಬಿಕೆಗಳು, ಅಂಧ ಶ್ರದ್ಧೆ ಹಾಗೇ ಉಳಿದಿವೆ. ಇವುಗಳನ್ನು ನೋಡಿ ಧರ್ಮವೆಂದರೆ ಯುವಕರು ಮೂಗು ಮುರಿಯುವ ಸ್ಥಿತಿ ತಲುಪಿದ್ದಾರೆ. ಪ್ರಗತಿ ಪರ ಧರ್ಮಕ್ಕೆ ದೇವನೊಬ್ಬನೆ ಆಗಿದ್ದಾನೆ. ವಚನ ಸಾಹಿತ್ಯದ ಅಭ್ಯಾಸ ಅನುಷ್ಠಾನದಿಂದ ಮೂಢಾಚಾರಗಳು ಓಡಿಹೋಗಲು ಸಾಧ್ಯ. ವಾರದ ಸಾಮೂಹಿಕ ಪ್ರಾರ್ಥನೆಯು ವ್ಯಕ್ತಿಯ `Servicing Station’ ಎನ್ನುವುದನ್ನು ಅರಿತು ಆಚರಿಸೋಣ.


ಹೀಗೆ ಕೂಡಲ ಸಂಗಮದ ಬಸವ ಧರ್ಮ ಪೀಠಾಧ್ಯಕ್ಷರಾದ ಪರಮ ಪೂಜ್ಯಶ್ರೀ ಮನ್ ನಿರಂಜನ ಮಹಾಜಗದ್ಗುರು ಡಾ. ಮಾತೆ ಮಹಾದೇವಿ ತಾಯಿಯವರು ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಬೆಳಗಾವಿ ಜಿಲ್ಲಾ ಲಿಂಗಾಯತ ಧರ್ಮ ಮಹಾಸಭಾ, ರಾಷ್ಟ್ರೀಯ ಬಸವದಳ, ಕ್ರಾಂತಿ ಗಂಗೋತ್ರಿ ಅಕ್ಕನಾಗಲಾಂಬಿಕಾ ಮಹಿಳಾ ಗಣ, ಗಣಾಚಾರ ದಳ, ವಿಶ್ವಗುರು ಬಸವ ಜ್ಯೋತಿ ಯಾತ್ರಾ ಸಮಿತಿಯ ಮತ್ತು ವಚನ ಚಿಂತನಾ ವೇದಿಕೆಗಳ ಸಹಯೋಗದಲ್ಲಿ : ಮಂಗಳವಾರ, ತಾ. 02.09.2014 ರಂದು ಕಣಬರ್ಗಿ ರಸ್ತೆಯಲ್ಲಿರುವ ವಿಶ್ವಗುರು ಬಸವ ಮಂಟಪದಲ್ಲಿ ಬೆಳಿಗ್ಗೆ 11 ಗಂಟೆಗೆ 1)ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ 84ನೆ ಜಯಂತಿ, 2) ಪೂಜ್ಯಶ್ರೀ ಜಗದ್ಗುರು ಗಂಗಾದೇವಿ ಮಾತಾಜಿಯವರ

೫೦ನೆಯ ವರ್ಧಂತಿ, ೩) ರಾಷ್ಟ್ರೀಯ ಬಸವದಳದ ಹುಟ್ಟು ಹಬ್ಬ ಮತ್ತು ೪) ಲಿಂಗಾಯತ ಧರ್ಮದ ಪವಿತ್ರ ಮಾಸಾಚರಣೆಯ ಅಂಗವಾಗಿ ಶ್ರಾವಣ ಮಾಸಾದ್ಯಂತ ೩೩ ದಿನಗಳ ಪರ್ಯಂತ ನಡೆದ "ಮನ, ಮನೆಗಳಲ್ಲಿ ವಿಶ್ವಗುರು ಬಸವ ಜ್ಯೋತಿ ಯಾತ್ರೆ"ಯ ಸಮಾರೋಪ ಕಾರ್ಯಕ್ರಮ– ಹೀಗೆ ನಾಲ್ಕೂ ಶರಣ–ಹಬ್ಬಗಳನ್ನು ಸೇರಿಸಿ "ಚತುರ್ ಶರಣೋತ್ಸವ" ಎಂಬ ಹೆಸರಿನಲ್ಲಿ ಒಂದೇ ವೇದಿಕೆಯಲ್ಲಿ ಆಚರಿಸಲಾಯಿತು.

ಬೆಳಗಾವಿ ವಿಶ್ವಗುರು ಬಸವ ಮಂಟಪದ ಸಂಚಾಲಕರಾದ ಪೂಜ್ಯ ಶರಣೆ ಸರೋಜಿನಿ ಅಲ್ಲಯ್ಯನವರ ಮಠ ನೇತೃತ್ವ ವಹಿಸಿದ್ದರು. ಕೊಲ್ಹಾಪುರ ಅಲ್ಲಮಗಿರಿಯ ಜಗದ್ಗುರು ಬಸವಲಿಂಗ ಸ್ವಾಮೀಜಿ ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ವಿಶ್ವಗುರು ಬಸವಣ್ಣನವರ ಪೂಜೆಯನ್ನು ಶರಣೆಯರು ನೆರವೇರಿಸಿದರು. ಸಾಮೂಹಿಕ ಪ್ರಾರ್ಥನೆಯನ್ನು ಪೂಜ್ಯ ಡಾ. ಮಾತಾಜಿಯವರು ಹೇಳಿಸಿದರು. ಬಸವ ಧ್ವಜಾರೋಹಣವನ್ನು ಅಧ್ಯಕ್ಷತೆ ವಹಿಸಿದ್ದ ಬೆಳಗಾವಿ ಜಿಲ್ಲಾ ಲಿಂಗಾಯತ ಧರ್ಮ ಮಹಾಸಭಾದ ಗೌರವಾಧ್ಯಕ್ಷರಾದ ಡಾ. ಶಿ.ಬಾ. ಪಾಟೀಲರು ಮಾಡಿದರು. ಚಿಕ್ಕೊಪ್ಪದ ಚಿ. ಮಧು – ಗುರು ಬಸವಣ್ಣನವರ ಕುರಿತು ವಿಚಾರ ಮಂಡಿಸಿದರು. ಅಶೋಕ ಬೆಂಡಿಗೇರಿ ಅರ್ಪಿಸಿದ "ಅನರ್ಘ್ಯ ರತ್ನ" ಫಲಕವನ್ನು ಪೂಜ್ಯ ಮಾತಾಜಿ ಅನಾವರಣ ಗೊಳಿಸಿದರು. ಶರಣೆ ಅಕ್ಕಮಹಾದೇವಿ ಕಂಬಾರಗಣವಿ ಮತ್ತು ಬಸವರಾಜೇಶ್ವರಿ ಬೆಂಡಿಗೇರಿ ವಚನ ನೃತ್ಯ ಪ್ರದರ್ಶಿಸಿದರು. ಈ ಸಂದರ್ಭದಲ್ಲಿ ಎರಡು ಗ್ರಂಥಗಳನ್ನು –೧) "ಸಿಂಧು ರಹಸ್ಯ ಲಿಪಿಯ ಶೋಧ ಮತ್ತು ಓದು" ಹಿಂದಿ ಮೂಲದ ಈ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದವರು ಕೆ.ಬಿ.ಬ್ಯಾಳಿ ಮತ್ತು ೨) ಕುತೂಹಲಕಾರಿ ಐತಿಹಾಸಿಕ 'ಶಿವ' ಪರಂಪರೆ ಕುರಿತು ಬೆಳಕು ಚೆಲ್ಲುವ "ಗೊಂಡ್ವಾನ ಸಂಸ್ಕೃತಿ ಅರ್ಥಾತ್ ಸಿಂಧು ಸಂಸ್ಕೃತಿ" ಎನ್ನುವ ಸಂಶೋಧನಾ ಕೃತಿ– ಸಂಪಾದನೆ ಎಮ್.ಆರ್. ಪಂಪನಗೌಡ– ಲೋಕಾರ್ಪಣೆ ಮಾಡಲಾಯಿತು. ಗ್ರಂಥ ವಿಮರ್ಶೆಯನ್ನು ರಾಣಿ ಚನ್ನಮ್ಮ ವಿ.ವಿ.ದ ಸೆನೇಟ್ ಸದಸ್ಯರೂ ಚಿಂತಕರೂ ಆದ ಡಾ. ಸಿದ್ದಣ್ಣ ಉತ್ನಾಳ್ ಮಾಡಿದರು. ಸಂಪಾದಕರಾದ ಎಮ್. ಆರ್. ಪೊಂಪನಗೌಡ್ರು ತಾವು ಪಟ್ಟ ಪರಿಶ್ರಮ ಮತ್ತು ಕೃತಿಯನ್ನು ಕುರಿತು ಮಾತನಾಡಿದರು. ಜ್ಯೋತಿ ಕಾರ್ಯಕ್ರಮದ ಅನುಭವ ಕುರಿತು ಹೀರಾಚಂದ ಟೋಣ್ಣಣ್ಣವರ್ ಮತ್ತು ಪಾಂಡುರಂಗ ದೊಡ್ಡಕುರುಬರ್ ಮಾತನಾಡಿದರು. ಗ್ರಂಥ ಸಂಪಾದಕ ಎಮ್.ಆರ್. ಪಂಪನಗೌಡ ಮತ್ತು ವಿಮರ್ಶಕ ಡಾ. ಸಿದ್ದಣ್ಣ ಉತ್ನಾಳ್‌ರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ವಿಶ್ವಗುರು ಬಸವ ಮಂಟಪದ ಸ್ಥಳ ದಾಸೋಹಿಗಳಾದ ಶಂಕರ ಗುಡಸ್ ಮತ್ತು ಚಿಕ್ಕೊಪ್ಪದ ಚನ್ನಪ್ಪ ನರಸಣ್ಣನವರನ್ನು ಗೌರವಿಸಲಾಯಿತು. ಜ್ಯೋತಿಯಾತ್ರೆಯನ್ನು ಯಶಸ್ವಿಗೊಳಿಸಿದ ಅಲ್ಲಯ್ಯನವರಮಠ ದಂಪತಿ, ಕೆ.ಬಸವರಾಜ, ಮಾರಯ್ಯ ಗಡಗಲಿ, ಮಲ್ಲಿಕಾರ್ಜುನ ಸತ್ತಿಗೇರಿ ಮತ್ತು ಬಸವಪ್ರಭು ದೊಡ್ಡಮನಿಯರನ್ನು ಸನ್ಮಾನಿಸಲಾಯಿತು.

ವರದಿ– ಕೆ. ಬಸವರಾಜು

ರಾಷ್ಟ್ರೀಯ ಬಸವ ದಳ, ಬೆಳಗಾವಿ


ಗುಲ್ಬರ್ಗಾದಲ್ಲಿ ನಡೆದ ಬಸವ ಜ್ಯೋತಿ ಸಮಾರೋಪ ಸಮಾರಂಭ



ಬೆಂಗಳೂರಿನಲ್ಲಿ ನಡೆದ ವಿಶ್ವಧರ್ಮ ಪ್ರವಚನ ಮುಕ್ತಾಯ ಸಮಾರಂಭದಂದು ಪೂಜ್ಯರು ಹಾಗೂ ಶರಣ- ಶರಣೆಯರಿಂದ ಪಥಸಂಚಲನ




ಬೆಳಗಾವಿ ಜಿ|| ರಾಮದುರ್ಗದಲ್ಲಿ ನಡೆದ ವಿಶ್ವಧರ್ಮ ಪ್ರವಚನ ಮುಕ್ತಾಯ ಸಮಾರಂಭ



ಮುದ್ದೇಬಿಹಾಳದ ಗಣ್ಯರಿಂದ ಪೂಜ್ಯ ಮಾತಾಜಿದ್ವಯರಿಗೆ ಗೌರವ ಸನ್ಮಾನ



ಬೆಳಗಾವಿಯಲ್ಲಿ ನಡೆದ ಬಸವಜ್ಯೋತಿ ಸಮಾರೋಪ ಸಮಾರಂಭದಲ್ಲಿ
"ಸಿಂಧು ರಹಸ್ಯ ಲಿಪಿಯ ಶೋಧ ಮತ್ತು ಓದು" ಪುಸ್ತಕ ಬಿಡುಗಡೆ ಪೂಜ್ಯ ಮಾತಾಜಿಯವರಿಂದ



ಬೆಂಗಳೂರಿನ ವಿಜಯನಗರದಲ್ಲಿ ವಿಶ್ವಧರ್ಮ ಪ್ರವಚನ ಸಮಾರೋಪ ಸಮಾರಂಭ

Registerd NO/KA/BGW/50/2012-2014, RNI 19980/70, POSTED AT MBC BANGALORE GPO ON 3rd,10th,20th, OF EVERY MONTH. LICENCED TO POST WITHOUT PRE PAYMENT WPP-17. PAGES 32+4 (COVER PAGES)